

# ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ)

**ಮಂಗಳೂರು – ಕಾಸರಗೋಡು**

## <u>ವಾರ್ಷಿಕ ವರದಿ</u>

ಆತ್ಮೀಯ ಬಂಧುಗಳೇ,

ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ) ಮಂಗಳೂರು–ಕಾಸರಗೋಡು ಇದರ ವಾರ್ಷಿಕ ಮಹಾಸಭೆಗೆ ಆಗಮಿಸಿದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ವಲಯ ಸಂಚಾಲಕರು, ಮಹಿಳಾ ಘಟಕದ ಸದಸ್ಯರು, ಯುವ ವೇದಿಕೆಯ ಸದಸ್ಯರು, ವಿಶೇಷ ಅಹ್ವಾನಿತರು, ಸದಸ್ಯರುಗಳು ಹಾಗೂ ಎಲ್ಲಾ ಸ್ವಜಾತಿ ಬಂಧುಗಳಿಗೆ ಗೌರವ ಪೂರ್ವಕ ಸ್ವಾಗತವನ್ನು ಕೋರುತ್ತಾ ಸಂಘದ 2018–2019 ನೇ ಸಾಲಿನ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷಪಡುತ್ತೇವೆ.

ದಿನಾಂಕ 20–05–2018 ರ ಭಾನುವಾರದಂದು ಮಂಗಳೂರಿನ ಜಪ್ಪಿನ ಮೊಗರಿನಲ್ಲಿರುವ ನಮ್ಮ ಸಂಘದ ಸಮುದಾಯ ಭವನದಲ್ಲಿ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ದೇವೋಜಿ ರಾವ್ ಜಾಧವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಯು. ಗಿರೀಶ್ ರಾವ್ ಭೋಂಸ್ಲೆ ಹಾಗೂ ಲೆಕ್ಕಪತ್ರವನ್ನು ಕೋಶಾಧಿಕಾರಿ ಶ್ರೀ ಶ್ರೀಧರ್ ರಾವ್ ಬಹುಮಾನ್ ಇವರು ಸಭೆಗೆ ಮಂಡಿಸಿದ ಬಳಿಕ ವಿಚಾರ ವಿನಿಮಯ ನಡೆದು ವರದಿ ಹಾಗೂ ಲೆಕ್ಕಪತ್ರವು ಮಹಾಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ತದನಂತರ ಸಂಘದ 2018–19ನೇ ಸಾಲಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಮಹಿಳಾ ಘಟಕ ಮತ್ತು ಯುವ ವೇದಿಕೆಯ ಸಂಚಾಲಕರನ್ನು ಆಯ್ಕೆ ಮಾಡಲಾಯಿತು.

**<u>ಪದಾಧಿಕಾರಿಗಳು.</u>**

| | |
|---|---|
| **ಅಧ್ಯಕ್ಷರು** | : ಶ್ರೀ ಎಂ.ದೇವೋಜಿ ರಾವ್ ಜಾಧವ್ ದಿನಾಂಕ 13–06–2018 ರ ತನಕ |
| | **ಶ್ರೀ ಎ. ಯತೀಂದ್ರ ಬಹುಮಾನ್ ದಿನಾಂಕ 29–07–2018 ರಿಂದ** |
| **ಕಾರ್ಯದರ್ಶಿ** | : ಶ್ರೀ ಬಿ ರಾಜೇಶ್ ರಾವ್ ಪಾಟೀಲ್ |
| **ಕೋಶಾಧಿಕಾರಿ** | : ಶ್ರೀ ಕೆ. ಶ್ರೀಧರ್ ರಾವ್ ಬಹುಮಾನ್ |
| **ಉಪಾಧ್ಯಕ್ಷರು** | : ಶ್ರೀ ಪುರುಷೋತ್ತಮ ಬಹುಮಾನ್ |
| | : ಶ್ರೀ ಬಿ. ಕೃಷ್ಣ ಧರೇಕರ್ |
| **ಜೊತೆಕಾರ್ಯದರ್ಶಿ** | : ಶ್ರೀ ಪ್ರದೀಪ್ ಚಂದ್ರ ಜಾಧವ್ |
| | : ಶ್ರೀ ಶ್ರೀಧರ ರಾವ್ ಪಾಟೀಲ್ |

**ಕಾರ್ಯಕಾರಿ ಸಮಿತಿಯ ಸದಸ್ಯರು : ಶ್ರೀಯುತರುಗಳಾದ**

ಸಂಜೀವ ರಾವ್ ಸಿಂಧ್ಯಾ, ಬೋಳಾರ
ಸದಾನಂದ ರಾವ್ ಕಟ್ವಾಟ್, ಮಂಜೇಶ್ವರ
ಶ್ರೀಮತಿ ಪ್ರೇಮಲತಾ ವೈ ರಾವ್. ಕಾಸರಗೋಡು
ಮೋಹನ್ ರಾವ್ ಭೋಂಸ್ಲೆ, ಎಕ್ಕೂರು
ಧನಂಜಯ ಬಹುಮಾನ್, ಕರ್ಮಾರ್
ಬಿ.ಜೆ. ಚಂದ್ರಶೇಖರ ಪಾಟೀಲ್, ಕುಂಪಲ
ಎಂ. ನಾಗರಾಜ ಸಿಂಧ್ಯಾ, ಬಿಜೈ
ನಾಗೇಶ್ವರ ರಾವ್ ಪವಾರ್, ಕಾಸರಗೋಡು
ಗೋಪಿನಾಥ ರಾವ್ ಚವ್ಹಾಣ್, ಮಣಿಪಾಲ್
ಉಮೇಶ್ ರಾವ್ ಜಾಧವ್, ಪುತ್ತೂರು
ನಿಳೋಜಿ ರಾವ್ ಭೋಂಸ್ಲೆ, ಬಿ.ಸಿ.ರೋಡ್
ವಾಮನ ಮುಳ್ಳಂಗೋಡು.
ಸೋಮಶೇಖರ್ ರಾವ್ ಜಗತ್ತಾಪ್, ಕುಂಪಲ
ಭಾಸ್ಕರ ರಾವ್ ಲಾಡ್, ಕಾರ್ಕಳ.
ಗಿರೀಶ್ ರಾವ್ ವಾಗ್ಮಾನ್, ಕುಂಡಗೋಳಿ
ಯು.ಗಿರೀಶ್ ರಾವ್ ಭೋಂಸ್ಲೆ, ಬೋಳಾರ
ಎಂ. ಯತೀಶ್ ಕುಮಾರ್ ಪಾಟೀಲ್, ಮುಳಿಯಾರು
ಪ್ರಕಾಶ್ ರಾವ್ ಲಾಡ್. ಕುಂಟಾರು
ಶ್ರೀಮತಿ ತ್ರಿವೇಣಿ ಯಶವಂತ ಜಾಧವ್
ಶ್ರೀಮತಿ ಗೀತಾ ಅಶೋಕ್ ಭೋಂಸ್ಲೆ, ಬೋಳಾರ
ಶ್ರೀಮತಿ ಆಶಾಕಿರಣ್ ಸಪ್ಟೇಕರ್, ಅಶೋಕನಗರ.

**ವಲಯ ಸಂಚಾಲಕರು : ಶ್ರೀಯುತರಾದ**

| | | |
|---|---|---|
| ಪ್ರಮೋದ್ ಬಹುಮಾನ್ | – | ಕಾಸರಗೋಡು ವಲಯ |
| ಸಂತೋಷ್ ಮಾವಿನಕಲ್ಲು | – | ಕುಂಡಂಗೋಳಿ ವಲಯ |
| ಬಿ. ಸದಾನಂದ ಪಾಟೀಲ್ | – | ಮಲ್ಲ ವಲಯ |
| ಜನಾರ್ಧನ್ ಕಡೆಂಗೋಡು | – | ಅದೂರು ವಲಯ |
| ಉದಯ ಸಿ.ಎಚ್. | – | ಕುಂಟಾರು ವಲಯ |
| ವಿವೇಕ ಸಿರಿಯಾರ್ | – | ಅಡೂರು ವಲಯ |
| ಅಶೋಕ್ ಜಾಧವ್ | – | ಮಂಗಳೂರು ಉತ್ತರ ವಲಯ |
| ವಿಶ್ವನಾಥ ಕೆ. ಜಾಧವ್ | – | ಮಂಗಳೂರು ದಕ್ಷಿಣ ವಲಯ |
| ಶ್ರೀಮತಿ ಸಬಿತ ಟಿ ಭೋಂಸ್ಲೆ | – | ಮಂಗಳೂರು ಪಶ್ಚಿಮ ವಲಯ |
| ಜೀವನ್ ಕುಮಾರ್ ಜಗತ್ತಾಪ್ | – | ಮಂಗಳೂರು ಪೂರ್ವ ವಲಯ |

**ಮಹಿಳಾ ಘಟಕ:**

| | | |
|---|---|---|
| ಸಂಚಾಲಕರು (ಪ್ರಧಾನ) | : | ಶ್ರೀಮತಿ ಕೌಶಿಕಲಾ ಚಂದ್ರಮಾನ್ |
| ಕಾಸರಗೋಡು (ಸಂಚಾಲಕರು) | : | ಶ್ರೀಮತಿ ಚೈತ್ರಾ ಧರೇಕರ್ |
| ದಕ್ಷಿಣ ಕನ್ನಡ | : | ಶ್ರೀಮತಿ ಗೀತಾ ಚಂದ್ರಶೇಖರ ಜಗತ್ತಾಪ್ |

**ಯುವ ವೇದಿಕೆ:–**

| | | |
|---|---|---|
| ಸಂಚಾಲಕರು | : | ಲೋಕೇಶ್ ಪಿ. ಬಹುಮಾನ್ |
| ಉಪ ಸಂಚಾಲಕರು | : | ಧನುಷ್ ವಾಗ್ಮಾನ್ |
| | : | ರಾಜಕುಮಾರ್ ಲಾಡ್ |

2018–2019 ನೇ ಸಾಲಿನ ಯೋಜಿತ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಮಹನೀಯರುಗಳನ್ನು ವಿಶೇಷ ಅಹ್ವಾನಿತರಾಗಿ ಸಂಘದ ಪ್ರಥಮ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

**ವಿಶೇಷ ಅಹ್ವಾನಿತರು : ಶ್ರೀಯುತರಾದ**

| | |
|---|---|
| ಮಹದೇವ ಪಾಟೀಲ್, ಅಂಬಿಕಾ ರೋಡ್. | ಅಶೋಕ್ ಲಾಡ್, ಕರ್ಮಾರ್ |
| ಸುಧಾಕರ್ ರಾವ್ವಾಗ್ಮಾನ್, ಅಂಬುಕುಂಜೆ | ಗಿರಿಧರ್ ರಾವ್ ವಾಗ್ಮಾನ್, ಕುಂಡಂಗೋಳಿ |
| ಶ್ರೀಮತಿ ಪೂರ್ಣಿಮಾ ಪ್ರಭಾಕರ್ ಪವಾರ್, ಕೆ.ಪಿ.ಟಿ. | ರಾಧಕೃಷ್ಣ ಜಾಧವ್, ಪಡ್ರೆ |
| ಸುಧಾಕರ್ ರಾವ್ ಪಾಟೀಲ್, ಜಲ್ಲಿಗುಡ್ಡೆ | ಹರಿಕೇಶವ್‌ಜಿ ಜಾಧವ್, ಜಲ್ಲಿಗುಡ್ಡೆ. |
| ಶಿವಾಜಿ ರಾವ್ ಪವಾರ್, ಅತ್ತಾವರ | ಪುರುಷೋತ್ತಮ ಸಿಂಧ್ಯಾ, ಪಂಡಿತ್ ಹೌಸ್. |
| ಶ್ರೀಮತಿ ದಿವ್ಯ ಮದುಸೂದನ್ ಪವಾರ್, ಪಾಂಡೇಶ್ವರ. | ಪ್ರಭಾಕರ್ ರಾವ್ ಬಹುಮಾನ್, ನಂಜನಗೂಡು. |
| ಎಂ.ವಾಸುದೇವೋಜಿ ರಾವ್ ಜಾಧವ್, ಅತ್ತಾವರ | ಶೈಲೇಶ್ ಬಹುಮಾನ್, ಕರ್ಮಾರ್. |
| ವಿಶ್ವನಾಥ ಜಗತ್ತಾಪ್, ಪಡೀಲ್ | ಶ್ರೀಮತಿ ಲತಾ ಗಂಗಾಧರ್, ಜಲ್ಲಿಗುಡ್ಡೆ. |
| ಗಂಗಾಧರ ಬಹುಮಾನ್, ಜಲ್ಲಿಗುಡ್ಡೆ. | ವೆಂಕಟಗಿರಿ ಚೌಹಾಣ್, ಕುಂಪಲ |
| ಪುರುಷೋತ್ತಮ ರಾವ್ ಕಟ್ವಾಟ್. ಕುತ್ತಾರು. | ಮುಕುಂದ ರಾಜ್, ಮಲ್ಲ |
| ನಾರಾಯಣ ರಾವ್ ಲಾಡ್, ಕುಂಪಳ | ನಾಗೇಂದ್ರ ರಾವ್ ತೋರಥ್. ವಾಮಂಜೂರು |
| ಶ್ರೀಮತಿ ವಿಜಯ ಪುರಂದರ, ಜಲ್ಲಿಗುಡ್ಡೆ | ರಾಮೋಜಿ ರಾವ್ ವಾಗ್ಮಾನ್, ಕರ್ಮಾರ್. |
| ರವೀಂದ್ರನಾಥ್ ಜೀ ಜಗತ್ತಾಪ್, ಕಾವೂರು. | ತನಂಜಯ ಸಿಂಧ್ಯಾ, ಕೊಲ್ಯ. |
| ಶ್ರೀಮತಿ ಹರಿಣಿ ನಾಗೇಶ್ವರ್ ರಾವ್ ಪವಾರ್, ಕಾಸರಗೋಡು. | ಯತೀಶ್ ಬಹುಮಾನ್, ಕುಂಪಳ |
| ಗುಣಸಾಗರ ವಾಗ್ಮಾನ್, ಜೆಪ್ಪು. | ಅನಂತ ಪದ್ಮರಾಜ್ ಸಿಂಧ್ಯಾ, ಮಂಗಳಾನಗರ. |

| | |
|---|---|
| ಕೇಶವ್‌ಜೀ ಜಗತ್ತಾಪ್, ಕುಳಾಯಿ | ಶಿಶುಪಾಲ್ ರಾವ್ ಭೋಂಸ್ಲೆ, ಆಳಪೆ |
| ಹರಿಶ್ಚಂದ್ರ ರಾವ್ ಪವಾರ್, ಬಾಬುಗುಡ್ಡೆ. | ದಿವಾಕರ್ ಜಾಧವ್, ಜೆಪ್ಪು ಕುಡುಪ್ವಾಡಿ |

**2018–2019ನೇ ಸಾಲಿನ ಯೋಜಿತ ಕಾರ್ಯಕ್ರಮದ ಅನುಷ್ಠಾನಕ್ಕೆ ಜವಾಬ್ದಾರಿಯನ್ನು ಈ ಕೆಳಕಂಡ ಮಹನೀಯರುಗಳಿಗೆ ಹಂಚಿಕೆ ಮಾಡಲಾಯಿತು.**

| | | |
|---|---|---|
| **ಸಮನ್ವಯ** | : ದಕ್ಷಿಣ ಕನ್ನಡ | : ಶ್ರೀ ಬಿ.ಜೆ. ಚಂದ್ರಶೇಖರ್ ಪಾಟೀಲ್, ಕುಂಪಲ. |
| | ಕಾಸರಗೋಡು | ಶ್ರೀ ಕೃಷ್ಣ ಧರೇಕರ್. ಕೊರಕೋಡು |
| **ಸದಸ್ಯತ್ವ ನೋಂದಣಿ** | : ದಕ್ಷಿಣ ಕನ್ನಡ | : ಶ್ರೀ ಅನಂತ ಪದ್ಮರಾಜ ಸಿಂಧ್ಯ, ಮಂಗಳೂರು. |
| | ಕಾಸರಗೋಡು | : ಶ್ರೀ ಶ್ರೀಧರ ಪಾಟೀಲ್, ಮಲ್ಲ. |
| **ರಕ್ತದಾನ ವೇದಿಕೆ** | : ದಕ್ಷಿಣ ಕನ್ನಡ | : ಶ್ರೀ ಶೈಲೇಶ್ ಬಹುಮಾನ್, ಕರ್ಮಾರ್. |
| | ಕಾಸರಗೋಡು | : ಶ್ರೀ ರಾಧಾಕೃಷ್ಣ ಜಾಧವ್, ಪಡ್ರೆ. |
| **ಸಭಾನಡವಳಿ ದಾಖಲೆ/ವಾರ್ತಾ ಪ್ರಚಾರ** | : ದಕ್ಷಿಣ ಕನ್ನಡ | : ಶ್ರೀ ಯತೀಂದ್ರ ಎ. ಬಹುಮಾನ್, ಮೂಡಬಿದ್ರೆ |
| | ಕಾಸರಗೋಡು | : ಶ್ರೀಮತಿ ಪ್ರೇಮಲತಾ ವೈ ರಾವ್. |
| **ಆಂತರಿಕ ಲೆಕ್ಕ ಪರಿಶೋಧನೆ** | | : ಶ್ರೀ ಉಮೇಶ್ ರಾವ್ ಜಾಧವ್, ಪುತ್ತೂರು. |
| | | ಶ್ರೀ ನಾಗರಾಜ್ ಸಿಂಧ್ಯಾ, ಬಿಜೈ. |
| | | ಶ್ರೀ ರಾಮೋಜಿ ರಾವ್ ವಾಗ್ಮಾನ್ |
| **ಜಮೀನು/ ಕಟ್ಟಡ ಉಸ್ತುವಾರಿ** | | : ಶ್ರೀ ಹರಿಶ್ಚಂದ್ರ ರಾವ್ ಪವಾರ್, ಬಾಬುಗುಡ್ಡೆ |
| | | : ಶ್ರೀ ದಿವಾಕರ್ ಜಾಧವ್, ಜೆಪ್ಪು |
| **ಅಂತರ್ ಜಾಲ ಅಭಿವೃದ್ಧಿ** | | : ಶ್ರೀ ಪ್ರದೀಪ್‌ಚಂದ್ರ ಜಾದವ್, ಕುಂಪಳ |
| | | ಶ್ರೀ ಕೆ. ಶ್ರೀಧರ್ ರಾವ್‌ಬಹುಮಾನ್, ಕುಂಪಳ. |
| **ಮಲ್ಲ/ಶೃಂಗೇರಿ ಕಾರ್ಯಕ್ರಮ** | | : ಶ್ರೀ ಶ್ರೀಧರ ಪಾಟೀಲ್ ಮಲ್ಲ. |
| **ಸಾಂಸ್ಕೃತಿಕ ಕಾರ್ಯಕ್ರಮ** | : ದಕ್ಷಿಣ ಕನ್ನಡ | : ಶ್ರೀ ವಾಮನ ಮುಳ್ಳಂಗೋಡು. |
| | | ಶ್ರೀಮತಿ ವಿಜಯ ಪುರಂದರ, ಜಲ್ಲಿಗುಡ್ಡೆ. |
| | ಕಾಸರಗೋಡು | : ಶ್ರೀ ಮುಕುಂದರಾಜ್ ಮಲ್ಲ. |
| | | ಶ್ರೀಮತಿ ಗಾಯತ್ರಿ ಸೂರ್ಯನಾರಾಯಣ ಚೌಹಾಣ್ |
| **ಆಟೋಟ ಸ್ಪರ್ಧೆ–** | ಸಂಚಾಲಕರು | : ಶ್ರೀ ಗಿರೀಶ್ ರಾವ್ ಭೋಂಸ್ಲೆ, ಬೋಳಾರ. |
| | ಉಪ ಸಂಚಾಲಕರು : | ಶ್ರೀ ರಾಜ್ ಕುಮಾರ್ ಲಾಡ್, ಕೊಲ್ಯ |
| | | ಶ್ರೀ ಧನುಷ್ ಮುಳ್ಳಂಗೋಡು, ಕಾಸರಗೋಡು |
| | | ಶ್ರೀ ಸುಧಾಕರ್ ವಾಗ್ಮಾನ್, ಅಂಬುಕುಂಜೆ |
| **ವಿದ್ಯಾರ್ಥಿ ವೇತನ/ ಪ್ರತಿಭಾ ಪುರಸ್ಕಾರ** | | : ಶ್ರೀ ಸದಾನಂದ ಕಟ್ವಾಟ್, ಮಂಜೇಶ್ವರ. |
| | | ಶ್ರೀ ನಾಗರಾಜ ಸಿಂಧ್ಯ, ಬಿಜೈ. |
| | | ಶ್ರೀ ಕೃಷ್ಣ ಧರೇಕರ್, ಕೊರಕೋಡು. |
| | | ಶ್ರೀ ಪ್ರಮೋದ್ ಕುಮಾರ್, ಕಾಸರಗೋಡು. |
| **ಜಾತಿಗೆ ಸಂಬಂಧಿಸಿದ ಮತ್ತು ಪತ್ರ ವ್ಯವಹಾರ** | | : ಶ್ರೀ ಧನಂಜಯ ಬಹುಮಾನ್, ಕರ್ಮಾರ್. |
| **ಬೈಲಾ ತಿದ್ದುಪಡಿ ಸಮಿತಿ. ಸಂಚಾಲಕರು.** | | : ಶ್ರೀ ಗುಣಸಾಗರ ವಾಗ್ಮಾನ್, ಜೆಪ್ಪು. |
| **ಸದಸ್ಯರು** | | : ಶ್ರೀ ಪುರುಷೋತ್ತಮ ರಾವ್ ಬಹುಮಾನ್, ಮಂಕಿಸ್ಟ್ಯಾಂಡ್. |
| | | ಶ್ರೀ ಕೃಷ್ಣ ಬಿ. ಧರೇಕರ್, ಕೊರಕ್ಕೋಡು |
| | | ಶ್ರೀ ಸದಾನಂದ ಕಟುವಾಟ್, ಮಂಜೇಶ್ವರ. |
| | | ಶ್ರೀ ಗೋಪಿನಾಥ್ ರಾವ್ ಚೌಹಾಣ್, ಮಣಿಪಾಲ್ |

ಬೈಲಾದಲ್ಲಿ ಸಂಘಕ್ಕೆ ಅನುಕೂಲಕರವಾದ ಹಲವಾರು ಸೇರಿಕೆ ಹಾಗೂ ತಿದ್ದುಪಡಿಗಳನ್ನು ಬೈಲಾ ಸಮಿತಿಯ ಸಲಹೆಯಂತೆ ಮಾಡಿದ ಸಂಚಾಲಕರಾದ ಶ್ರೀ ಗುಣಸಾಗರ್ ವಾಗ್ಮಾನ್‌ರವರು ಮೇ 5, 2019ರಂದು ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅದನ್ನು ಮಂಡಿಸಿರುತ್ತಾರೆ. ಸಭೆಯಲ್ಲಿ ಬೈಲಾದಲ್ಲಿನ ತಿದ್ದುಪಡಿ ಮತ್ತು ಸೇರಿಕೆಯ ಬಗ್ಗೆ ಚರ್ಚಿಸಿ ಕೆಲವು ಬದಲಾವಣೆಗಳೊಂದಿಗೆ ಅದನ್ನು 9–06–2019ರಂದು ನಡೆಯುವ ಮಹಾಸಭೆಯಲ್ಲಿ ಮಂಡಿಸಲು ಕಾರ್ಯಕಾರಿ ಸಮಿತಿಯು ಒಪ್ಪಿಗೆ ನೀಡಿರುತ್ತದೆ.

**ಸಭೆಗಳು**: 2018–2019 ನೇ ಸಾಲಿನಲ್ಲಿ ಒಟ್ಟು 13 ಕಾರ್ಯಕಾರಿ ಸಮಿತಿ ಸಭೆ, 2 ವಿಶೇಷ ಕಾರ್ಯಕಾರಿ ಸಭೆ ಮತ್ತು 1 ವಿಶೇಷ ಮಹಾಸಭೆ ಜರಗಿತು.

ಮಹಾಸಭೆಯ ಖರ್ಚಿಗಾಗಿ ದೇಣಿಗೆ ನೀಡಿದ ಮಹನೀಯರುಗಳ ವಿವರ ಈ ರೀತಿ ಇದೆ.

| | | | | |
|---|---|---|---|---|
| 1. | ಪದ್ಮನಾಭ ಜಾಧವ್ ಪುತ್ತೂರು | ರೂ. | 2000/– | |
| 2. | ರವೀಂದ್ರನಾಥ್‌ಜೀ ಕಾವೂರು | ರೂ. | 500/– | |
| 3. | ಪದ್ಮನಾಭ ಕುಂಪಲ | ರೂ. | 500/– | **ಒಟ್ಟು ರೂ. 3000/–** |

**ಸದಸ್ಯತನ**: ವರದಿ ವರ್ಷದ ಅಂತ್ಯಕ್ಕೆ ಸಂಘದಲ್ಲಿ 1272 ಅಜೀವ ಸದಸ್ಯರಿದ್ದು ವರದಿ ವರ್ಷದಲ್ಲಿ 400 ಬಂಧುಗಳು ಆಜೀವ ಸದಸ್ಯರಾಗಿಯೂ ಸೇರ್ಪಡೆಯಗಿರುತ್ತಾರೆ.

**ಸದಸ್ಯರ ಗಮನಕ್ಕೆ.**

ಸಮಾಜ ಸಂಘದಲ್ಲಿ ಕಳೆದ ಹಲವಾರು ವರ್ಷಗಳಿಂದ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿ ಅನುಪಮ ಸೇವೆ ಸಲ್ಲಿಸಿದ ಶ್ರೀ ಎಂ. ದೇವೋಜಿ ರಾವ್ ಜಾಧವ್‌ರವರ ಅಕಾಲಿಕ ನಿಧನದ ಪ್ರಯುಕ್ತ ತೆರವಾದ ಅಧ್ಯಕ್ಷ ಸ್ಥಾನಕ್ಕೆ ದಿನಾಂಕ 29–07–2018 ರ ಭಾನುವಾರ ದಂದು ವಿಶೇಷ ಮಹಾಸಭೆಯನ್ನು ಕರೆಯಲಾಗಿದ್ದು, ಮಹಾಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ಬಿ.ಕೃಷ್ಣ ಧರೇಕರ್‌ರವರು ವಹಿಸಿದ್ದು ಸಂಘದ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದು ನೂತನ ಅಧ್ಯಕ್ಷರಾಗಿ ಶ್ರೀ ಯತೀಂದ್ರ ಎ. ಬಹುಮಾನ್ ರವರು ಅವಿರೋಧವಾಗಿ ಆಯ್ಕೆಯಾದರು. ತದನಂತರ ಮುಂದಿನ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಶ್ರೀ ಯತೀಂದ್ರ ಎ. ಬಹುಮಾನ್‌ರವರು ಅಧ್ಯಕ್ಷರಾದ ನೆಲೆಯಲ್ಲಿ ತೆರವಾದ ಕಾರ್ಯಕಾರೀ ಸಮಿತಿಯ ಸದಸ್ಯರ ಸ್ಥಾನಕ್ಕೆ ಯತೀಶ್ ಕುಮಾರ್ ಪಾಟೀಲ್‌ರವರನ್ನು ಆಯ್ಕೆ ಮಾಡಲಾಯಿತು. ಹಾಗೆಯೇ ಆದೂರು, ಕುಂಟಾರು ವಲಯದಿಂದ ಕಾರ್ಯಕಾರೀ ಸಮಿತಿಗೆ ಸದಸ್ಯರಿಲ್ಲದಿರುವ ಕಾರಣ ಶ್ರೀ ಪ್ರಕಾಶ್ ಲಾಡ್ ಕುಂಟಾರು ಇವರನ್ನು ಕಾರ್ಯಕಾರೀ ಸಮಿತಿಗೆ ಆಯ್ಕೆ ಮಾಡಲಾಯಿತು.

## ಕಾರ್ಯಕ್ರಮಗಳು

**ವಿದ್ಯಾರ್ಥಿ ವೇತನ:**

ಸಮಾಜ ಸಂಘದ ಕಾರ್ಯ ಚಟುವಟಿಕೆಯ ಮೂಲ ಉದ್ದೇಶವಾಗಿರುವ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ. ಈ ನಿಟ್ಟಿನಲ್ಲಿ 2018–19 ನೇ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿ ಮತ್ತು ಮೇಲ್ಪಟ್ಟು ಉತ್ತೀರ್ಣರಾದವರಿಗೆ ವಿದ್ಯಾರ್ಥಿ ವೇತನ ನೀಡಿಕೆಗಾಗಿ ವಲಯ ಸಂಚಾಲಕರ ಮುಖೇನ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಅದರಂತೆ ಬಂದಂತಹ 52 ಅರ್ಜಿಗಳನ್ನು ವಲಯ ಸಂಚಾಲಕರು ಮತ್ತು ಪದಾಧಿಕಾರಿಗಳು ಪರಿಶೀಲಿಸಿ ತದನಂತರ 52 ಅರ್ಜಿಗಳನ್ನು ಪುರಸ್ಕರಿಸಲಾಗಿದ್ದು ರೂ.52,000/– ಮೊಬಲಗನ್ನು ರೂ.1000/– 34 ಪಿ.ಯು.ಸಿ ಹಾಗೂ 18 ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗಿ **ಉಳಿದಂತೆ 7 ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ವೇತನವನ್ನು ಪಡೆದುಕೊಳ್ಳದ ಕಾರಣ ಆ ಹಣವನ್ನು ಪುನಃ** ಸಂಘದ ಖಾತೆಗೆ ಜಮಾ ಮಾಡಲಾಯಿತು. ಅಂದಾಜು ಆಯವ್ಯಯದಂತೆ ರೂ.25,000/– ವನ್ನು ಸಂಘದಿಂದ ಬರಿಸಿದ್ದು, ಉಳಿದ ರೂ.15000/– ನ್ನು ದಾನಿಗಳಾದ ದಿವಂಗತ ಎಲ್ಲೋಜಿ ಎ.ಕೌಮಾರ್ ಇವರ ಸ್ಮರಣಾರ್ಥ ಶ್ರೀಮತಿ ಪ್ರೇಮಲತಾ ವೈ ರಾವ್ ರವರ ರೂ.1,00,000/–, ದಿವಂಗತ ಗೋಪಾಲ ರಾವ್ ಕಾಪಿಹಿತ್ಲು ಕಾಸರಗೋಡು ಇವರ ನೆನಪಿಗಾಗಿ ನೀಡಿದ ರೂ.25,000/–, ಶ್ರೀಯುತ ಜನಾರ್ಧನ ರಾವ್ ಬಹುಮಾನ್ (ಅಮೇರಿಕ) ಇವರು ನೀಡಿದ ರೂ.18,000/–, ದಿವಂಗತ ರತ್ನಾಕರ ರಾವ್ ಕೌಮಾರ್‌ರವರ ನೆನಪಿಗಾಗಿ ಅವರ ನಿಕಟವರ್ತಿಗಳು ನೀಡಿದ ರೂ17,500/–, ದಿವಂಗತ ಮಾದೋಜಿ ರಾವ್ ಜಗತಾಪ್ ಜಲ್ಲಿಗುಡ್ಡೆ ಇವರ ನೆನಪಿಗಾಗಿ ನೀಡಿದ ರೂ.10,000/–, ದಿವಂಗತ ಸೇಸೋಜಿ ರಾವ್, ಮುಂಡೋಡು ಇವರ ಸ್ಮರಣಾರ್ಥ ಇವರ ಮಕ್ಕಳು ಶ್ರೀ ಧರ್ಮಪಾಲ್ ಜಾಧವ್ ಮತ್ತು ಸಹೋದರರು ನೀಡಿದ ರೂ.11,000/–, ದಿವಂಗತ ಶ್ರೀಮತಿ ಎಂ.ಭಾಗೀರಥಿ ಮತ್ತು

ದಿವಂಗತ ಕೆ.ಪೊಪ್ಪೋಜಿ ರಾವ್ ಜಗತ್ತಾಪ್ ಮಂಜೇಶ್ವರ ಇವರ ಸ್ಮರಣಾರ್ಥ ಇವರ ಮಕ್ಕಳಾದ ಶ್ರೀ ಸೋಮಶೇಖರ ರಾವ್ ಜಗತ್ತಾಪ್ ಕುಂಪಳ ಮತ್ತು ಸಹೋದರರು ನೀಡಿದ ರೂ.22,000/- ಈ ಎಲ್ಲಾ ಠೇವಣಿಗಳಿಂದ ಬಂದ ಬಡ್ಡಿಯ ಹಣ ಮತ್ತು ಇತರ ದಾನಿಗಳ ಧನಸಹಾಯದಿಂದ 2018-19ನೇ ಸಾಲಿನ ವಿದ್ಯಾರ್ಥಿ ವೇತನ ರೂ.52,000 ವನ್ನು ನೀಡಲಾಯಿತು.

ವಿದ್ಯಾರ್ಥಿಗಳಿಗೆ ನಮ್ಮ ಸಂಘದ ಜೊತೆಗೆ ನಮ್ಮವರೇ ಆದ ಅನಿವಾಸಿ ಭಾರತಿಯರು ರಾಯಲ್ ಆರ್ಯಾಸ್ ದುಬೈ (RAD) ಎಂಬ ಸಂಸ್ಥೆಯನ್ನು ಕಟ್ಟಿಕೊಂಡು ಈ ಬಾರಿ ಎಸ್.ಎಸ್.ಎಲ್.ಸಿ ಹಾಗು ಪಿ.ಯು.ಸಿ ವ್ಯಾಸಂಗ ಮಾಡುವ 15 ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಲಾ ರೂ.5000/- ದಂತೆ ಓರ್ವ ಇಂಜಿನೀಯರಿಂಗ್ ವಿದ್ಯಾರ್ಥಿನಿಗೆ ರೂ. 10,000/- ದಂತೆ ಒಟ್ಟು ರೂ.85,000/- ವಿದ್ಯಾರ್ಥಿ ವೇತನ ನೀಡಿರುತ್ತಾರೆ. ಇದರೊಂದಿಗೆ ದಿವಂಗತ ಎಲ್ಲೋಜಿ ಎ ಕೌಮಾರ್ ಇವರ ಟ್ರಸ್ಟ್ ವತಿಯಿಂದ ರೂ.60,000/- ವನ್ನು ವೃತ್ತಿಪರ ಶಿಕ್ಷಣದ 6 ವಿದ್ಯಾರ್ಥಿಗಳಿಗೆ ತಲಾ ರೂ.10,000/- ನೀಡಿರುತ್ತಾರೆ. ನಮ್ಮ ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸಿದ ನಮ್ಮ ಸದಸ್ಯರಲ್ಲೊಬ್ಬರಾದ ಶ್ರೀಮತಿ ಮೋಹಿನಿ ಜಯರಾಮರವರು ವಿಕಲ ಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಸಲುವಾಗಿ ರೂ.1 ಲಕ್ಷವನ್ನು ಠೇವಣಿಯಾಗಿ ನೀಡಿ ಅದರಲ್ಲಿ ಬಂದಂತಹ ಬಡ್ಡಿಯ ಹಣವನ್ನು ವಿಕಲ ಚೇತನ ವಿದ್ಯಾರ್ಥಿ ವೇತನಕ್ಕಾಗಿ ಬಳಸಿಕೊಳ್ಳಿ ಎಂದು ಕೊಡುಗೆ ನೀಡಿರುತ್ತಾರೆ. ಇದರ ಜೊತೆಗೆ ಒಂದು ವೇಳೆ ರೂ. 1 ಲಕ್ಷದಿಂದ ಬಂದ ಬಡ್ಡಿ ವಿದ್ಯಾರ್ಥಿ ವೇತನಕ್ಕೆ ಕಡಿಮೆಯಾದರೆ ಉಳಿಕೆಯ ಹಣವನ್ನು ತಾನು ಕೊಡುವೆನೆಂಬ ಆಶ್ವಾಸನೆಯನ್ನೂ ನೀಡಿರುತ್ತಾರೆ. ಇವರಿಗೆ ನಮ್ಮ ಸಂಘದ ಪರವಾಗಿ ಕೃತಜ್ಞತೆಗಳು.

**ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ವೇತನಕ್ಕೆ ಧನಸಹಾಯ ಮಾಡಿದ ಮಹನೀಯರುಗಳ ಹೆಸರು ಈ ರೀತಿ ಇದೆ.**

| | | | |
|---|---|---|---|
| 1. ಸಂಜೀವ ರಾವ್ ಸಿಂಧ್ಯಾ | ರೂ. 5,000/- | 2. ಸುರೇಶ್ ರಾವ್ ಲಾಡ್, ಜಲ್ಲಿಗುಡ್ಡೆ. | ರೂ. 1000/- |

**ವಿದ್ಯಾರ್ಥಿ ವೇತನ ಸಮಾರಂಭದ ಖರ್ಚಿಗೆ ದೇಣಿಗೆ ನೀಡಿದ ಮಹನೀಯರುಗಳ ಹೆಸರು ಈ ಕೆಳಗಿನಂತಿದೆ.**

| | | | |
|---|---|---|---|
| 1. ಯತೀಂದ್ರ ಎ ಬಹುಮಾನ್ | ರೂ. 10,000/- | 2. ಶ್ರೀಮತಿ ತ್ರಿವೇಣಿ ಜಾಧವ್ | ರೂ. 5,000/- |
| 3. ಯತೀಶ್ ಕುಮಾರ್ ಪಾಟೀಲ್ | ರೂ. 3,000/- | 4. ರಾಜೇಶ್ ಪಾಟೀಲ್ | ರೂ. 3,000/- |
| 5. ಬಿ. ಕಷ್ಣ ಧರೇಕರ್ | ರೂ. 2,000/- | 6. ಪುರುಷೋತ್ತಮ ರಾವ್ ಬಹುಮಾನ್ | ರೂ. 2,000/- |
| 7. ಕೆ. ಶ್ರೀಧರ್ ರಾವ್ ಬಹುಮಾನ್ | ರೂ. 2,000/- | 8. ಧನಂಜಯ ಬಹುಮಾನ್ | ರೂ. 2,000/- |
| 9. ಉಮೇಶ್ ರಾವ್ ಜಾಧವ್ | ರೂ. 2,000/- | 10. ಪ್ರದೀಪ್ ಚಂದ್ರ ಜಾಧವ್ | ರೂ. 2,000/- |
| 11. ಗೋಪಿನಾಥ ರಾವ್ ಚೌಹಾಣ್ | ರೂ. 2,000/- | 12. ಪ್ರಮೋದ್ ಕುಮಾರ್ ಬಹುಮಾನ್ | ರೂ. 2,000/- |
| 13. ಭಾಸ್ಕರ್ ರಾವ್ ಲಾಡ್ | ರೂ. 2,000/- | 14. ವಾಮನ ಮುಳ್ಳಂಗೋಡು. | ರೂ. 2,000/- |
| 15. ಸಾಯಿರಾಂ ಪವಾರ್ | ರೂ. 2,000/- | 16. ಶ್ರೀಮತಿ ದಿವ್ಯಾ ಮಧುಸೂದನ್ | ರೂ. 2,000/- |
| 17. ಸತ್ಯಾರ್ಥಿ ರಾವ್ ಸಾಣೂರು | ರೂ. 1,111/- | 18. ಶ್ರೀಮತಿ ಪ್ರೇಮಲತಾ ವೈ ರಾವ್ | ರೂ. 1,000/- |
| 19. ಬಿ.ಜೆ.ಚಂದ್ರಶೇಖರ ಪಾಟೀಲ್ | ರೂ. 1,000/- | 20. ಮೋಹನ್ ರಾವ್ ಭೋಂಸ್ಲೆ | ರೂ. 1,000/- |
| 21. ಹರಿಕೇಶವ್‌ಜೀ ಜಾಧವ್ | ರೂ. 1,000/- | 22. ವಿಶ್ವನಾಥ ರಾವ್ ಜಗತ್ತಾಪ್ | ರೂ. 1,000/- |
| 23. ನಾಗರಾಜ ಸಿಂಧ್ಯಾ | ರೂ. 1,000/- | 24. ರವೀಂದ್ರನಾಥ್‌ಜೀ ಕಾವೂರು | ರೂ. 1,000/- |
| 25 ಸೋಮಶೇಖರ ರಾವ್ ಜಗತ್ತಾಪ್ | ರೂ. 1,000/- | 26. ನಿಳೋಜಿ ರಾವ್ ಭೋಂಸ್ಲೆ | ರೂ. 1,000/- |
| 27. ಅನಂತ ಪದ್ಮರಾಜ್ ಸಿಂಧ್ಯಾ | ರೂ. 1,000/- | 28. ಸದಾನಂದ ಕಟ್ವಾಟ್ | ರೂ. 1,000/- |
| 29. ಶ್ರೀಮತಿ ಕೌಶಿಕಲಾ ಮೋಹನ್ | ರೂ. 1,000/- | 30. ಕಿರಣ್‌ಚಂದ್ರ ಪವಾರ್ ದುಬೈ | ರೂ. 1,000/- |
| 31. ವಿಟ್ಠಲ್‌ಜೀ ಜಾಧವ್. ಉಡುಪಿ | ರೂ. 1,000/- | 32. ರಾಮೋಜಿ ರಾವ್ ವಾಗ್ಮಾನ್ | ರೂ. 1,000/- |
| 33. ಮುಕುಂದ ರಾವ್ ಲಾಡ್ ಅಂಬುಕುಂಜೆ | ರೂ. 1,000/- | 34 ಸಾರ್ತೋಜಿ ರಾವ್ ಬಿ.ಪಿ.ಸಿ.ಎಲ್. | ರೂ. 1,000/- |
| 35.ಸುಧಾಕರ ರಾವ್ ಬಹುಮಾನ್ ಕಾರ್ಕಳ | ರೂ. 1,000/- | 36. ಚಂದ್ರಶೇಖರ್ ಜಾಧವ್. | ರೂ. 700/- |
| 37 ಪದ್ಮನಾಭ ರಾವ್ ಕುಂಪಲ | ರೂ. 500/- | 38. ಕೇಶವ ರಾವ್ ಜಗತ್ತಾಪ್, ಸುರತ್ಕಲ್ | ರೂ. 500/- |
| 39. ಜಯಂತ್ ರಾವ್ ಲಾಡ್ ಜಲ್ಲಿಗುಡ್ಡೆ. | ರೂ. 500/- | 40. ಸುರೇಶ್ ರಾವ್ ಲಾಡ್ ಅಳಪೆ. | ರೂ. 500/- |
| 41. ವಿಶಾಲಕ್ಷಿ ದೇವರಾಯ ಕರ್ಮಾರ್. | ರೂ. 500/- | 42. ಜಗದೀಶ ರಾವ್ ಬೇಕಲ್ ನೀರುಮಾರ್ಗ | ರೂ. 500/- |
| 43. ಪುರುಷೋತ್ತಮ ರಾವ್ ಕಟ್ವಾಟ್. | ರೂ. 500/- | 44. ವಿಶ್ವನಾಥ ರಾವ್ ಕುಂಪಲ | ರೂ. 300/- |

| | | | | | |
|---|---|---|---|---|---|
| 45. ಸದಾನಂದ ಪಾಟೀಲ್ ಮಲ್ಲ | ರೂ. | 300/– | 46. ನಾಗೇಂದ್ರ ರಾವ್ ಥೋರತ್. | ರೂ. | 251/– |
| 47. ರಾಧಾಕೃಷ್ಣ ಜಾಧವ್ ಪಡ್ರೆ. | ರೂ. | 250/– | 48. ಗಂಗಾಧರ ರಾವ್ ಸಿರಿಯಾರ್ ಕಾಂತಡ್ಕ | ರೂ. | 250/– |
| 49. ವೆಂಕಟಗಿರಿ ಚೌಹಾಣ್ ಕುಂಪಲ | ರೂ. | 200/– | 50. ಪುರುಷೋತ್ತಮ ರಾವ್ ಜಾಧವ್ | ರೂ. | 200/– |
| 51. ವಾಸುದೇವೋಜಿ ರಾವ್ ಜಾಧವ್ | ರೂ. | 200/– | 52. ಪ್ರಭಾಕರ್ ರಾವ್ ಸಿಂಧ್ಯಾ | ರೂ. | 200/– |
| 53. ನಾಗೇಶ್ ರಾವ್ ಜಾಧವ್. ಡಿ.ಎ.ಆರ್. | ರೂ. | 200/– | 54. ಚಕ್ರಪಾಣಿ ಪವಾರ್ | ರೂ. | 100/– |
| 55. ಎಂ.ವಿ.ರಾಜೀವ ಮಡಿಕೇರಿ | ರೂ. | 100/– | 56. ರವೀಂದ್ರಜಾಥ್ ಜೀ ಕೆ.ಎಂ. | ರೂ. | 100/– |
| | | | **ಒಟ್ಟು ದೇಣಿಗೆಯ ಹಣ** | | **ರೂ.70,962/–** |

**ಪ್ರತಿಭಾ ಪುರಸ್ಕಾರ:–**

ಈ ಬಾರಿ ಕಾಸರಗೋಡು ಜಿಲ್ಲೆ, ದ.ಕ. ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ವಿದ್ಯಾರ್ಥಿವೇತನ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಜಪ್ಪಿನಮೊಗರಿನಲ್ಲಿರುವ ಸಮಾಜ ಸಂಘದ ಸಮುದಾಯ ಭವನದ ಸಭಾಂಗಣದಲ್ಲಿ ದಿನಾಂಕ 26–08–2018 ರ ಭಾನುವಾರದಂದು ಸಂಘದ ಅಧ್ಯಕ್ಷ ಶ್ರೀ ಯತೀಂದ್ರ ಎ. ಬಹುಮಾನ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಗೌರವಾನ್ವಿತ ಅತಿಥಿಗಳಾಗಿ

1. **ಶ್ರೀ ವೇದವ್ಯಾಸ ಕಾಮತ್,** ಶಾಸಕರು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
2. **ಶ್ರೀ ಜೆ.ಆರ್.ಲೋಬೋ,** ಮಾಜಿ ವಿಧಾನ ಸಭಾ ಸದಸ್ಯರು.
3. **ಶ್ರೀ ಭಾಸ್ಕರ್ ಕೆ.,** ಮೇಯರ್ ಮಂಗಳೂರು ಮಹಾನಗರ ಪಾಲಿಕೆ.
4. **ಶ್ರೀ ಸುರೇಂದ್ರ ಕುಮಾರ್,** ಮಂಗಳೂರು ನಗರ ಪಾಲಿಕೆ ಸದಸ್ಯರು
5. **ಶ್ರೀಮತಿ ಮೋಹಿನಿ ಜಯರಾಮ್,** ಮಾಲಕರು, ಜಯಾ ಜ್ಯುವೆಲ್ಲರ್ಸ್, ಮಂಗಳೂರು
6. **ಶ್ರೀ ಉತ್ತಮರಾಜ್ ಜಾಧವ್,** ದುಬೈ.

ಇವರುಗಳ ಗೌರವ ಉಪಸ್ಥಿತಿಯಲ್ಲಿ ಕಾರ್ಯಕ್ರಮಗಳು ಬಹಳ ವಿಜೃಂಭಣೆಯಿಂದ ಜರಗಿತು.

**ಪ್ರತಿಭಾವಂತ ವಿದ್ಯಾರ್ಥಿಗಳು ಕಾಸರಗೋಡು ವಿಭಾಗ:**

| | | | |
|---|---|---|---|
| 1. | ಕು. ಅರ್ಪಿತ | ಎಸ್.ಎಸ್.ಎಲ್.ಸಿ. | 98% |
| 2. | ಕು. ವಿದ್ಯಾ ಸರಸ್ವತಿ. ಪಿ. | " | 95% |
| 3. | ಕು. ವಿದ್ಯಾ ಶಾರದೆ ಪಿ. | " | 95% |
| 4. | ಕು. ಪ್ರತೀಕ್ಷ ಎಂ. | " | 95% |
| 5. | ಹೃತಿಕ್ ಸಿ.ಎಚ್. | " | 95% |
| 6. | ಕು. ಧನ್ಯಶ್ರೀ. | " | 94% |
| 7. | ಪರೀಕ್ಷಿತ್ | " | 91% |
| 8. | ಚಿತ್ರಾಂಜನ | **ಪಿ.ಯು.ಸಿ.** | 95% |
| 9. | ಶ್ರಾವ್ಯ ಕೆ.ಪಿ. | **ಪದವಿ** | 87% |

**ದಕ್ಷಿಣಕನ್ನಡ ಜಿಲ್ಲೆ:**

| | | | |
|---|---|---|---|
| 1. | ಭುವನ ಚಂದ್ರ ಎಂ. | **ಎಸ್.ಎಸ್.ಎಲ್.ಸಿ** | 94.33% |
| 2. | ರೂಪಕ್ | " | 92.64% |
| 3. | ವರುಣ್ ರಾಜ್ | " | 92.64% |
| 4. | ಕು. ನಿಧಿಶಾ ಜಾಧವ್ | " | 92.32% |
| 5. | ಕು. ಪಲ್ಲವಿ | " | 91.36% |
| 6. | ಕು. ಶ್ರೇಯಾಂಕ ಡಿ. | **ಪಿ.ಯು.ಸಿ** | 95.33% |
| 7. | ಕು. ಅನಿಶಾ ಎನ್. ರಾವ್. | " | 91.00% |
| 8. | ಕು. ರಾಖಿ | " | 91.00% |

9. ಕು. ನಿಶ್ಮಿತಾ ಎಂ. **ಪದವಿ** 77.66%

10. ಕು. ಮೇಘಾ ಎನ್. **ಸ್ನಾತಕೋತ್ತರ ಪದವಿ** 81.40%

11. ಕು. ದೀಪ್ತಿ ಎಂ.ಬಿ. **ಎಂ.ಟೆಕ್.** 94% ಬೆಳ್ಳಿಪದಕ ವಿಜೇತೆ.

**ಸಾಧಕರುಗಳಿಗೆ ಸನ್ಮಾನ:**

ಸಮಾಜ ಸಂಘವು ಪ್ರತೀ ವರ್ಷ ಸೇವೆ, ಕ್ರೀಡಾ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಮಾಜ ಬಂಧುಗಳನ್ನು ಗುರುತಿಸಿ ಸನ್ಮಾನಿಸುವ ಕಾರ್ಯವನ್ನು ನಿರಂತರವಾಗಿ ಹಮ್ಮಿಕೊಂಡು ಬಂದಿದೆ. ಈ ಬಾರಿ ಈ ಕೆಳಗೆ ನಮೂದಿಸಿದ ಸಾಧಕರನ್ನು ಗೌರವಿಸಿ ಸನ್ಮಾನಿಸಲಾಯಿತು.

1. ಶ್ರೀಮತಿ ಡಾ। ಸುಮತಿ ಎಸ್. ಪವಾರ್, ಕಾರ್ಕಳ – ಡಾಕ್ಟರೇಟ್ ಪದವಿಯನ್ನು ಪಡೆದಿರುವ ಸಲುವಾಗಿ.
2. ಶ್ರೀ ಮಾಸ್ಟರ್ ಗಗನ್ ಎ. – ಕರಾಟೆಯಲ್ಲಿ ಬಾಲ ಪ್ರತಿಭೆ.

**ವಿಕಲ ಚೇತನ ವಿದ್ಯಾರ್ಥಿಗಳಿಗೆ ಸಹಾಯ ಧನ:**

ಪ್ರತೀ ವರ್ಷದಂತೆ ಈ ವರ್ಷ ಕೂಡಾ ಈ ಕೆಳಗಿನ 8 ವಿಕಲಚೇತನ ವಿದ್ಯಾರ್ಥಿಗಳಿಗೆ ಸಹಾಯಧನವನ್ನು ರೂ.1000/– ದಂತೆ ನೀಡಲಾಯಿತು.

1. ಸುಮಿತಾ ಕುಮಾರಿ ಬಿ.ಆರ್. ಕುಂಡಂಗೋಳಿ.
2. ವಿನ್ಯಾಸ್ ಕೆ., ಕುಂಟಾರು ಮನೆ, ಕುಂಟಾರು.
3. ಕುಮಾರಿ ಮೌನಿತ. ಎಕ್ಕೂರು
4. ಕುಮಾರಿ ಜ್ಯೋತಿ ಮಂಗಳೂರು. ಅಂಧರ ಚಲನ ವಲನ ತರಬೇತಿ ಕೇಂದ್ರ ಬಾಬುಗುಡ್ಡೆ. ಮಂಗಳೂರು.
5. ಕುಮಾರಿ ತೇಜಸ್ವಿನಿ ಎಂ.ಆರ್. ಮಜಕ್ಕಾರು, ಮಲ್ಲ.
6. ಶ್ರವಣ್ ಎ. ಜಾಧವ್. ಉಜ್ಜೋಡಿ, ಮಂಗಳೂರು.
7. ಲೋಹಿತ್ ಎ. ಅಂಬುಕುಂಜೆ.
8. ಅಭಿಲಾಶ್ ಡಿ. ಪಿಲಿಕುಂಜೆ

**ಅಂಬಾಭವಾನಿ ಎಜ್ಯುಕೇಷನ್ ಟ್ರಸ್ಟ್:**

ಸಮಾಜ ಸಂಘದ ವತಿಯಿಂದ ಪ್ರಾರಂಭಗೊಂಡು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಬಡ್ಡಿರಹಿತ ಸಾಲದ ರೂಪದಲ್ಲಿ ಧನಸಹಾಯ ಮಾಡುವ ಹಾಗೂ ಇತರ ಉನ್ನತ ಉದ್ದೇಶಗಳನ್ನು ಇಟ್ಟುಕೊಂಡು ಅಂಬಾಭವಾನಿ ಎಜ್ಯುಕೇಷನ್ ಟ್ರಸ್ಟ್ 2004 ರಲ್ಲಿ ಪ್ರಾರಂಭಿಸಲಾಯಿತು. ನಿವಾಸಿ ಹಾಗೂ ಅನಿವಾಸಿ ಬಂಧುಗಳ ಪೂರ್ಣ ಸಹಕಾರದಿಂದ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ. ಇದರ ಲೆಕ್ಕ ಪತ್ರವನ್ನು ಪ್ರತ್ಯೇಕವಾಗಿ ಲಗ್ತೀಕರಿಸಲಾಗಿದೆ.

**ಶಿವಾಜಿ ಜಯಂತಿ ಆಚರಣೆ ಕಾರ್ಯಕ್ರಮ.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದ.ಕ. ಜಿಲ್ಲೆ, ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ) ಮಂಗಳೂರು–ಕಾಸರಗೋಡು ಮತ್ತು ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ ದ.ಕ. ಜಿಲ್ಲಾ ಘಟಕ ಇವರುಗಳ ಸಂಯುಕ್ತ ಆಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 392ನೇ ಜಯಂತ್ಯೋತ್ಸವವನ್ನು ದಿನಾಂಕ 19–02–2019 ರಂದು ಮಂಗಳೂರಿನ ಪುರಭವನದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಿದೆವು.

ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ದಕ್ಷಿಣ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ವೇದವ್ಯಾಸ ಕಾಮತ್ ರವರು ವಹಿಸಿದ್ದರು. ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮನೋರಂಜನೆಗಾಗಿ ಕೆ.ಕೆ.ಎಂ.ಪಿ. ಮಂಗಳೂರು ಘಟಕದ ಸದಸ್ಯರುಗಳುಗಳ ಮಕ್ಕಳು ಉತ್ತಮ ಮಟ್ಟದ ಭರತ ನಾಟ್ಯ ಪ್ರದರ್ಶನವನ್ನು ನೀಡಿ ಎಲ್ಲರ ಮನವನ್ನು ರಂಜಿಸಿದರು. ಕಟೀಲು ಶ್ರೀ ದುರ್ಗಾಪರಮೇಶ್ವರಿ ಕಾಲೇಜಿನ ಪ್ರೊಫೆಸರ್ ಶ್ರೀ ಸುರೇಶ್ ರವರು ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಉಪನ್ಯಾಸ ನೀಡಿದರು. ಮಧ್ಯಾಹ್ನ ಭೋಜನ ವಿರಾಮದ ಬಳಿಕ ಆರ್ಯ ಯಾನೆ ಮರಾಠ ಸಮಾಜ ಸಂಘದ ವತಿಯಿಂದ ದ.ಕ.ಜಿಲ್ಲೆ ಹಾಗೂ ಕಾಸರಗೋಡು ಜಿಲ್ಲೆಗಳ ವಲಯಗಳಿಂದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳು ಬಹಳ ಮನೋರಂಜಕವಾಗಿ ಜರಗಿತು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ

ಶ್ರೀ ಯತೀಂದ್ರ ಎ. ಬಹುಮಾನ್ ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಮೋಹಿನಿ ಜಯರಾಂ, ಶ್ರೀಮತಿ ಹರಿಣಿ ನಾಗೇಶ್ವರ್ ರಾವ್ ಪವಾರ್, ಶ್ರೀ ಟಿ.ಶಿವಾಜಿ ರಾವ್ ಬಹುಮಾನ್, ಶ್ರಿ ಜೆನ್ನೋಜಿ ರಾವ್ ಮುಂಡ್ಕೂರು, ಪ್ರೇಮಲತಾ ವೈ ರಾವ್ ಮತ್ತು ಕೆ.ಕೆ.ಎಂ.ಪಿ. ಯವರ ಪರವಾಗಿ ಶ್ರೀ ಸುರೇಶ್ ರಾವ್ ಲಾಡ್ ಉಪಸ್ಥಿತರಿದ್ದರು.

ಸದ್ರಿ ಸಂದರ್ಭದಲ್ಲಿ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮದಲ್ಲಿ ವಿಜೇತರಾದ ವಲಯಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉತ್ತಮ ಸಮೂಹ ಗೀತೆ ಹಾಗೂ ಸಮೂಹ ನೃತ್ಯ ಮಂಗಳೂರು ಪೂರ್ವ ವಲಯ ಪಡೆದುಕೊಂಡಿತು. ಉತ್ತಮ ಪ್ರಹಸನ ಮಂಗಳೂರು ಉತ್ತರ ವಲಯ ಪಡೆಯಿತು. ಸ್ಪರ್ಧಾಕಾರ್ಯಕ್ರಮದ ಪ್ರಥಮ ಸ್ಥಾನವನ್ನು ಕಾಸರಗೋಡು ವಲಯ ತಮ್ಮದಾಗಿಸಿಕೊಂಡರೆ ದ್ವಿತೀಯ ಸ್ಥಾನವನ್ನು ಮಂಗಳೂರು ಪೂರ್ವ ವಲಯ ಪಡೆಯಿತು.

ಶಿವಾಜಿ ಜಯಂತಿಯ ದಿನ ನಡೆದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳಿಗೆ ಆರ್ಥಿಕವಾಗಿ ಸಹಾಯ ನೀಡಿದ ಮಹನೀಯರುಗಳ ವಿವರ ಈ ಕೆಳಗಿನಂತಿದೆ.

| | | | |
|---|---|---|---|
| 1. | ಸಮಾಜ ಸಂಘ | ರೂ. | 7,250/– |
| 2. | ಟಿ. ಶಿವಾಜಿ ರಾವ್ ಬಹುಮಾನ್, ಕಾಸರಗೋಡು | ರೂ. | 5,000/– |
| 3. | ಯತೀಂದ್ರ ಎ. ಬಹುಮಾನ್ | ರೂ. | 5,000/– |
| 4. | ವಾಮನ, ಮುಳ್ಳಂಗೋಡು | ರೂ. | 5,000/– |
| 5. | ಜನ್ನೋಜಿ ರಾವ್, ಮುಂಡ್ಕೂರು | ರೂ. | 5,000/– |
| 6. | ಶ್ರೀಮತಿ ಹರಿಣಿ ನಾಗೇಶ್ವರ್ ರಾವ್, ಕಾಸರಗೋಡು | ರೂ. | 5,000/– |

**ಮಲ್ಲ ಹಾಗೂ ಶೃಂಗೇರಿ ಕಾರ್ಯಕ್ರಮ:**

ನಮ್ಮ ಸಮಾಜದ ಬಾಂಧವರು ಅನಾದಿ ಕಾಲದಿಂದಲೂ ಆರಾಧಿಸಿಕೊಂಡು ಬರುತ್ತಿರುವ ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸನ್ನಿಧಿಯಲ್ಲಿ ಸೇರಿ ಸಾಮೂಹಿಕ ಪ್ರಾರ್ಥನೆ, ಒಂದು ದಿನದ ಪೂಜೆ ಮತ್ತು ಅನ್ನಸಂತರ್ಪಣೆಯನ್ನು ನಡೆಸಿಕೊಂಡು ಬರುತ್ತಿರುವ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದು ಈ ವರ್ಷದ ದಿನಾಂಕ 26–02–2019 ರಂದು ಸದ್ರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸ್ವಜಾತಿ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ದುರ್ಗಾಪರಮೇಶ್ವರಿ ತಾಯಿಯ ಕೃಪೆಗೆ ಪಾತ್ರರಾದರು. ಈ ನಿಮಿತ್ತ ತಗಲಿದ ಖರ್ಚನ್ನು ಅಂದು ಅಲ್ಲಿ ಸೇರಿದ ಸಮಾಜ ಬಂಧುಗಳೇ ಭರಿಸಿರುತ್ತಾರೆ. ಸಂಸ್ಕೃತಿ ಹಾಗೂ ಪರಂಪರೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರತಿವರ್ಷದಂತೆ ಈ ವರ್ಷವು ಕೂಡಾ ದಿನಾಂಕ 10–03–2019 ರಂದು ಶೃಂಗೇರಿ ಶ್ರೀ ಗುರುಪೀಠವನ್ನು ಸಂದರ್ಶಿಸಿ ಜಗದ್ಗುರುಗಳ ಪಾದ ಪೂಜೆ ಮಾಡಿ ಗುರು ಕಾಣಿಕೆ ಸಲ್ಲಿಸಿ ಮಂತಾಕ್ಷತೆಯನ್ನು ಪಡೆದು ಕ್ಷೇತ್ರದ ಅನ್ನ ಪ್ರಸಾದ ಸೇವಿಸಿ ಶ್ರೀ ಶಾರದಾಂಬೆಯ ಕೃಪೆಗೆ ಪಾತ್ರರಾದೆವು.

**ಕ್ರೀಡಾ ಕೂಟ:**

ನಮ್ಮ ಸಂಘದ ವಾರ್ಷಿಕ ಕ್ರೀಡಾ ಕೂಟವು 2019 ರ ಜನವರಿ ತಿಂಗಳ 19 ಮತ್ತು 20 ರಂದು ಬೋಂದೆಲ್‌ನ ಹುಡ್ಕೊ ಮೈದಾನ ಹಾಗೂ ಜಿಲ್ಲಾ ಪೋಲೀಸ್ ಕವಾಯತು ಮೈದಾನದಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಯತೀಂದ್ರ ಎ. ಬಹುಮಾನ್ ರವರು ಕ್ರೀಡಾ ಜ್ಯೋತಿಯನ್ನು ಹಸ್ತಾಂತರಿಸುವ ಮೂಲಕ ಕ್ರೀಡಾ ಕೂಟವನ್ನು ಉದ್ಘಾಟಿಸಿದರು ಮತ್ತು ಕುಮಾರಿ ವರ್ಷ ಕ್ರೀಡಾ ಪ್ರತಿಜ್ಞೆ ನೆರವೇರಿಸಿದರು. ಕ್ರೀಡಾ ಕೂಟದಲ್ಲಿ ಚಿಕ್ಕ ಮಕ್ಕಳಿಂದ ಆರಂಭಿಸಿ ಎಲ್ಲಾ ವಯೋಮಾನದವರಿಗೆ ವಿವಿಧ ರೀತಿಯ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಪುರುಷರ ಕ್ರಿಕೆಟ್ ಪಂದ್ಯದಲ್ಲಿ ಪ್ರಥಮ ಸ್ಥಾನ ಮೂಕಾಂಬಿಕ ತಂಡ ಹಾಗೂ ದ್ವಿತೀಯ ಸ್ಥಾನವನ್ನು ಗ್ರೇಟ್ ಮರಾಠ ತಂಡವು ಪಡೆಯಿತು. ಮಹಿಳಾ ಕ್ರಿಕೆಟ್‌ನಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಕ್ವೀನ್ಸ್ ಇಲೆವೆನ್ ಕುಡ್ಲ ತಂಡ **ಎ** ಹಾಗೂ **ಬಿ** ತಂಡ ತಮ್ಮದಾಗಿಸಿಕೊಂಡರು. ಮಹಿಳಾ ತ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ ಛತ್ರಪತಿ ಪಡೀಲ್ ಪಡೆದುಕೊಂಂಡರೆ ದ್ವಿತೀಯ ಸ್ಥಾನವನ್ನು ಯುವ ಮರಾಠ ಕುಂಪಳವು ಪಡೆಯಿತು. ಪುರುಷರ ಹಗ್ಗ ಜಗ್ಗಾಟ ಪಂದ್ಯವು ಬಹಳ ರೋಚಕವಾಗಿತ್ತು. ಈ ಸ್ಪರ್ಧೆಯ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳು ಕಾಸರಗೋಡು ಮರಾಠ ಟೈಗರ್ಸ್ ತಂಡದ ಪಾಲಾಯಿತು. ಮಹಿಳಾ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ವೆಸ್ಟ್ ಆರ್ಯನ್ಸ್ ಹಾಗೂ ದ್ವಿತೀಯ ಸ್ಥಾನವನ್ನು ಮೂಕಾಂಬಿಕ ತಂಡವು ಪಡೆದುಕೊಂಡಿತು. ಆಥ್ಲೆಟಿಕ್ಸ್

ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ (Trac & Field) ಕ್ರೀಡಾಪಟುಗಳು ತಮ್ಮ ಉತ್ತಮ ಪ್ರತಿಭೆಯನ್ನು ತೋರಿಸಿದರು ಹಾಗೂ 4 x 100 ಮೀಟರ್ ರಿಲೇ ಓಟದಲ್ಲಿ ಮುಕಾಂಬಿಕ ತಂಡ ಪ್ರಥಮ ಸ್ಥಾನವನ್ನು ಹಾಗೂ ಛತ್ರಪತಿ ಪಡೀಲ್ ತಂಡ ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡಕೊಂಡರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ನಮ್ಮ ಸಂಘದ ಅಧ್ಯಕ್ಷರಾದ ಯತೀಂದ್ರ ಎ. ಬಹುಮಾನ್ ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಹರೀಶ್ ರಾವ್ ಲಾಡ್, ಕೇಶವ ರಾವ್ ಪವಾರ್, ಸಂಜೀವ ರಾವ್ ಸಿಂಧ್ಯಾ, ಕೀರ್ತನ್ ಕುಮಾರ್ ಲಾಡ್, ಗಿರಿರಾಜ್ ಧರೇಕರ್, ವೇದಿತ್ ರಾವ್ ಲಾಡ್, ಸುಧಾಕರ ರಾವ್ ಬಹುಮಾನ್, ಶ್ರೀಮತಿ ಕೋಕಿಲಾ ಹರೀಶ್ ರಾವ್ ಲಾಡ್ ಮತ್ತು ಪ್ರೇಮಲತಾ ವೈ ರಾವ್ ಪ್ರಶಸ್ತಿ ವಿತರಿಸಿ ವಿಜೇತರನ್ನು ಅಭಿನಂದಿಸಿದರು. ಕಾರ್ಯಕ್ರಮಕ್ಕೆ ಸುಮಾರು 1000 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸ್ವಜಾತಿ ಬಾಂಧವರು ಭಾಗವಹಿಸಿದರು. ತನ್ಮಧ್ಯೆ ಕ್ರೀಡೆಯಲ್ಲಿ ಭಾಗವಹಿಸುವವರು ಸಂಘದ ಸದಸ್ಯತ್ವ ಹೊಂದಿರಬೇಕು ಎನ್ನುವ ವಿಚಾರ ಕಡ್ಡಾಯವಿದ್ದುದರಿಂದ ಸರಿ ಸುಮಾರು 282ಕ್ಕೂ ಹೆಚ್ಚು ಮಂದಿ ಸಂಘದ ಆಜೀವ ಸದಸ್ಯರಾದರು. ಕ್ರೀಡಾ ಸಮಿತಿಯ ಸದಸ್ಯರೆಲ್ಲರೂ ಕ್ರೀಡಾ ಕೂಟದ ಯಶಸ್ಸಿಗಾಗಿ ಬಹಳ ಮುತುವರ್ಜಿಯಿಂದ ಕೆಲಸ ಮಾಡಿದ ಕಾರಣ ಸಂಘದ ವಾರ್ಷಿಕ ಕ್ರೀಡಾ ಕೂಟ ಬಹಳ ವಿಜೃಂಭಣೆಯಿಂದ ನಡೆಯಿತು.

**ವಾರ್ಷಿಕ ಕ್ರೀಡಾ ಕೂಟಕ್ಕಾಗಿ ದೇಣಿಗೆ ನೀಡಿ ಮಹನೀಯರುಗಳ ವಿವರ ಈ ಕೆಳಗಿನಂತಿದೆ.**

| | | | |
|---|---|---|---|
| 1. | ಹರೀಶ್ ರಾವ್ ಲಾಡ್, ಸೂರ್‌ಜೀ ಟೆಕ್ಸ್‌ಟೈಲ್ಸ್ | ರೂ. | 25,000 |
| 2. | ಕೇಶವ ರಾವ್ ಪವಾರ್, ಮಂಗಳೂರು | ರೂ. | 20,000 |
| 3. | ಕೀರ್ತನ್ ಕುಮಾರ್ ಲಾಡ್, ಕಾರ್ಕಳ | ರೂ. | 15,000 |
| 4. | ಯತೀಂದ್ರ ಎ ಬಹುಮಾನ್ | ರೂ. | 10,000 |
| 5. | ರಾಜೇಂದ್ರ ಕೆ. ಲಾಡ್, ಕಾಪಿಹಿತ್ಲು | ರೂ. | 10,000 |
| 6. | ವೇದಿತ್ ರಾವ್ ಲಾಡ್ | ರೂ. | 10,000 |
| 7. | ಸುಧಾಕರ್ ಬಹುಮಾನ್, ಕಾರ್ಕಳ | ರೂ. | 10,000 |
| 8. | ಸಂಜೀವ ರಾವ್ ಸಿಂಧ್ಯಾ | ರೂ. | 10,000 |
| 9. | ರಾಜ್ ಚಂದ್ರಮಾನ್, ದುಬೈ. | ರೂ. | 10,000 |
| 10. | ಪದ್ಮನಾಭ ರಾವ್ ಜಾಧವ್, ಪುತ್ತೂರು | ರೂ. | 10,000 |
| 11. | ಗಿರೀಶ್ ರಾವ್ ಭೋಂಸ್ಲೆ | ರೂ. | 5,000 |
| 12. | ಗಿರಿರಾಜ್ ಧರೇಕರ್ | ರೂ. | 5,000 |
| 13. | ಪ್ರಭಾಕರ್ ಧರೇಕರ್ | ರೂ. | 5,000 |
| 14. | ಉದಯ ಜೆ. ಸಿಂಧ್ಯಾ | ರೂ. | 5,000 |
| 15. | ಧನುಶ್ ವಿ ವಾಗ್ಮಾನ್. ಕಾಸರಗೋಡು | ರೂ. | 4,350 |
| 16. | ಹರೀಶ್ ಕಲ್ಲಗುಡ್ಡೆ. | ರೂ. | 4,000 |
| 17. | ಯಶ್‌ಪಾಲ್ ಬಹುಮಾನ್ | ರೂ. | 4,000 |
| 18. | ಪ್ರಶಾಂತ್ ರಾವ್ ಬಹುಮಾನ್, ಮಂಕಿಸ್ಟ್ಯಾಂಡ್ | ರೂ. | 3,800 |
| 19. | ಶ್ರೀಮತಿ ದಿವ್ಯಾ ಮಧುಸೂದನ್ ಪವಾರ್. | ರೂ. | 3,000 |
| 20. | ವಿಜಯಪ್ರಸಾದ್ ಬೆಂಗಳೂರು | ರೂ. | 3,000 |
| 21. | ಶ್ರೀಮತಿ ತ್ರಿವೇಣಿ ಯಶವಂತ್ ಜಾಧವ್ | ರೂ. | 3,000 |
| 22. | ಉಮೇಶ್ ರಾವ್ ಜಾಧವ್, ಪುತ್ತೂರು | ರೂ. | 3,000 |
| 23. | ರಾಜೇಶ್ ಪಾಟೀಲ್ | ರೂ. | 3,000 |
| 24. | ಪುರುಷೋತ್ತಮ ರಾವ್ ಬಹುಮಾನ್ | ರೂ. | 2,000 |
| 25. | ಕೆ. ಶ್ರೀಧರ್ ರಾವ್ ಬಹುಮಾನ್ | ರೂ. | 2,000 |
| 26. | ವಾಮನ ಮುಳ್ಳಂಗೋಡು | ರೂ. | 2,000 |

| | | |
|---|---|---|
| 27. ಯತೀಶ್ ಕುಮಾರ್ ಪಾಟೀಲ್ | ರೂ. | 2,000 |
| 28. ಪ್ರದೀಪ್ ಚಂದ್ರ ಜಾಧವ್ | ರೂ. | 2,000 |
| 29. ಬಿ.ಜೆ.ಚಂದ್ರಶೇಖರ ಪಾಟೀಲ್ | ರೂ. | 1,000 |
| 30. ಮೋಹನ್ ರಾವ್ ಭೋಂಸ್ಲೆ | ರೂ. | 1,000 |
| 31. ನಿಳೋಜಿ ರಾವ್ ಭೋಂಸ್ಲೆ | ರೂ. | 1,000 |
| 32. ಸೋಮಶೇಖರ ರಾವ್, ಕುಂಪಲ | ರೂ. | 1,000 |
| 33. ಹರಿಕೇಶವ್‌ಜೀ ಜಾಧವ್, ಜಲ್ಲಿಗುಡ್ಡೆ | ರೂ. | 1,000 |
| 34. ನಾಗೇಶ್ವರ್ ರಾವ್ ಪವಾರ್, ಕಾಸರಗೋಡು | ರೂ. | 1,000 |
| 35. ಗೋಪಿನಾಥ್ ರಾವ್ ಚೌಹಾಣ್ | ರೂ. | 1,000 |
| 36. ರವೀಂದ್ರನಾಥ್‌ಜೀ ಕಾವೂರು. | ರೂ. | 1,000 |
| 37. ಶ್ರೀಮತಿ ಕೌಶಿಕಲಾ ಮೋಹನ್ | ರೂ. | 1,000 |
| 38. ಶ್ರೀಧರ್ ಪಾಟೀಲ್, ಮಲ್ಲ | ರೂ. | 1,000 |
| 39. ಬಿ. ಕೃಷ್ಣ ಧರೇಕರ್, ಕಾಸರಗೋಡು | ರೂ. | 1,000 |
| 40. ಧನಂಜಯ ಬಹುಮಾನ್, ಕರ್ಮಾರ್ | ರೂ. | 1,000 |
| 41. ಸದಾನಂದ ಕಟ್ವಾಟ್, ಮಂಜೇಶ್ವರ | ರೂ. | 1,000 |
| 42. ಲೋಕೇಶ್ ಬಹುಮಾನ್, ಕರ್ಮಾರ್ | ರೂ. | 1,000 |
| 43. ಶೈಲೇಶ್ ಬಹುಮಾನ್, ಕರ್ಮಾರ್ | ರೂ. | 1,000 |
| 44. ಶ್ರೀಮತಿ ಆಶಾಕಿರಣ ಸಪ್ಪೇಕರ್ | ರೂ. | 500 |
| **ದೇಣಿಗೆಯ ಒಟ್ಟು ಮೊತ್ತ** | **ರೂ.** | **2,06,650** |

**ಸಮುದಾಯ ಭವನ:**

ನಮ್ಮ ಸಂಘದ ಹೆಮ್ಮೆಯ ಪ್ರತೀಕವಾದ ಆರ್ಯ ಮರಾಠ ಭವನವು ಪೂರ್ಣ ರೀತಿಯಲ್ಲಿ ಸಾರ್ವಜನಿಕರ ಸೇವೆ ಸಲ್ಲಿಸಲು ಸಜ್ಜಾಗದ ಕಾರಣ ಉಳಿದ ಕೆಲಸಗಳನ್ನು ಪೂರೈಸುವುದಕ್ಕಾಗಿ ಹಿಂದಿನ ಮಹಾಸಭೆಯ ರೂ 20 ಲಕ್ಷಗಳನ್ನು ಸಾಲ ಪಡೆಯುವ ತೀರ್ಮಾನದ ಪ್ರಕಾರ ನಮ್ಮ ಸದಸ್ಯರುಗಳಿಂದ ರೂ.17 ಲಕ್ಷಗಳನ್ನು ಮಾತ್ರ ಶೇಕಡಾ 9 ರ ಬಡ್ಡಿಯಲ್ಲಿ ಪಡೆದಿದ್ದು ಸಮುದಾಯ ಭವನಕ್ಕೆ ಅಗತ್ಯವಾದ ಲಿಫ್ಟ್, ಜನರೇಟರ್ ಹಾಗೂ ಇತರ ಕಾಮಗಾರಿಗಳನ್ನು ಪೂರ್ಣಗೊಳಿಸಿದೆವು. ಇನ್ನು ಮುಖ್ಯವಾಗಿ ಭವನದ ಆವರಣಕ್ಕೆ ಇಂಟರ್ಲಾಕ್‌ನ್ನು ಅಳವಡಿಸುವ ಕಾರ್ಯವು ಉಳಿದಿದೆ. ಈ ಕಾರ್ಯದಲ್ಲಿ ಮಂಗಳೂರು ಮಹಾನಗರ ಪಾಲಿಕೆ ಕೂಡಾ ತಮ್ಮ ಅನುದಾನದ ರೂ. 2 ಲಕ್ಷವನ್ನು ಮಂಜೂರು ಮಾಡಿರುತ್ತಾರೆ. ಈ ಹಣವಿನ್ನೂ ನಮ್ಮ ಕೈಸೇರಿಲ್ಲ. ಕಳೆದ ಆರ್ಥಿಕ ವರ್ಷದಲ್ಲಿ ನಮಗೆ ಸಮುದಾಯ ಭವನದ ಬಾಡಿಗೆ ಸುಮಾರು ರೂ. 6 ಲಕ್ಷದಷ್ಟು ಬಂದಿದ್ದು ಪ್ರಸ್ತುತ ಆರ್ಥಿಕ ವರ್ಷದಲ್ಲಿ ನಮಗೆ ಸುಮಾರು ರೂ.10 ಲಕ್ಷದಷ್ಟು ಬಾಡಿಗೆ ಬಂದಿರುತ್ತದೆ. ಮುಂದಿನ ದಿನಗಳಲ್ಲಿ ಈ ಆದಾಯ ಖಂಡಿತವಾಗಿ ಹೆಚ್ಚಾಗುತ್ತದೆ ಎನ್ನುವುದು ನಮ್ಮ ನಂಬಿಕೆ. ನಮ್ಮ ಭವನವು ಮುಖ್ಯ ರಸ್ತೆಗೆ ಸರಿಯಾಗಿ ಕಾಣುವುದಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಕಟ್ಟಡದ ಎದುರಿರುವ ದೊಡ್ಡ ಗಾತ್ರದ ಫ್ಲೆಕ್ಸ್ ಮತ್ತು ಇನ್ನೂ ಪೂರ್ಣಕೊಳ್ಳದ ರಾಷ್ಟ್ರೀಯ ಹೆದ್ದಾರಿಯ ಕೆಲಸ. ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಪೂರ್ಣಗೊಂಡಾಗ ನಮ್ಮ ಎದುರಿನ ಕಟ್ಟಡದ ಸುಮಾರು 20% ಅಂಶವನ್ನು ಕೆಡವುತ್ತಾರೆ ಜೊತೆಯಲ್ಲಿ ನಮ್ಮ ಭವನದ ಎದುರಿನಲ್ಲಿರುವ ಫ್ಲೆಕ್ಸ್ ಕೂಡಾ ಹೆದ್ದಾರಿಯ ಅಗಲೀಕರಣದ ಕಾರಣ ಸುಮಾರು 75% ರಷ್ಟು ಗಾತ್ರ ಕಡಿಮೆಯಾಗುತ್ತದೆ. ಆಗ ಮಾತ್ರ ನಮ್ಮ ಸದಸ್ಯರುಗಳ ಅಪೇಕ್ಷೆಯಂತೆ ನಮ್ಮ ಕಟ್ಟಡದ ಮುಂದಿನ ಭಾಗಕ್ಕೆ ಬೇಕಾದ ರೀತಿಯಲ್ಲಿ ಫೇಸ್ ಲಿಫ್ಟಿಂಗ್ (Elevation) ಕೆಲಸವನ್ನು ಮಾಡಬಹುದು. ನಮ್ಮ ಸಮುದಾಯ ಭವನಕ್ಕೆ ಸರಕಾರದ ವತಿಯಿಂದ ಮಂಜೂರಾದ ರೂ.70 ಲಕ್ಷದಲ್ಲಿ ರೂ.35 ಲಕ್ಷವು ಈಗಾಗಲೇ ಬಿಡುಗಡೆಯಾಗಿದ್ದು ಉಳಿಕೆಯ ರೂ. 35 ಲಕ್ಷವು ಈ ಆರ್ಥಿಕ ವರ್ಷದಲ್ಲಿ ನಮ್ಮ ಕೈಸೇರುವ ಸಾಧ್ಯತೆಯಿದೆ. ಈಗಾಗಲೇ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್‌ರವರ ನಿಧಿಯಿಂದ ರೂ. 5 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಸದ್ರಿ ಅನುದಾನವು ಸರಕಾರದ ವತಿಯಿಂದಲೇ ನಮ್ಮ ಭೋಜನ ಶಾಲೆಯ ಕಿಟಿಕಿಗಳಿಗೆ ಗ್ರಿಲ್ಸ್ ಮತ್ತು ಅಲ್ಯುಮಿನಿಯಂ ಶಟ್ಟರ್ಸ್‌ಗಳನ್ನು ಅಳವಡಿಸಲಾಗಿದೆ. ಸಮುದಾಯ ಭವನದ ಕಾಮಗಾರಿಗಳನ್ನು ನೆರವೇರಿಸಲು ತಲಾ ರೂ. 1 ಲಕ್ಷದಂತೆ 9% ಬಡ್ಡಿ ಸಹಿತ ಸಾಲ ನೀಡಿದ ಮಹನೀಯರುಗಳ ವಿವರ ಈ ರೀತಿ ಇದೆ.

| | | |
|---|---|---|
| 1) ಶ್ರೀ ಯತೀಂದ್ರ ಎ. ಬಹುಮಾನ್ | 2) ಸಂಜೀವ ರಾವ್ ಸಿಂಧ್ಯಾ | 3) ಕೀರ್ತನ್ ಕುಮಾರ್ ಲಾಡ್ |
| 4) ಭಾಸ್ಕರ್ ರಾವ್ ಲಾಡ್ | 5) ಹರಿಶ್ಚಂದ್ರ ಚೌಹಾಣ್ ಕುಂಪಳ | 6) ಗೋಪಿನಾಥ್ ರಾವ್ ಚೌಹಾಣ್ |
| 7) ಬಿ.ಜೆ. ಚಂದ್ರಶೇಖರ್ ಪಾಟೀಲ್ | 8) ಮಹದೇವ ಪಾಟೀಲ್ | 9) ಶ್ರೀಮತಿ ತ್ರೀವೇಣಿ ಯಶವಂತ ಜಾಧವ್ |
| 10) ಶ್ರೀಮತಿ ಜಯಲಕ್ಷ್ಮೀ ಚಂದ್ರಶೇಖರ್ | 11) ರಮೇಶ್ ಚೌಹಾಣ್ ಬಿ.ಸಿ. ರೋಡ್. | |
| 12) ಪುರುಷೊತ್ತಮ ಬಹುಮಾನ್ | 13) ಉಮೇಶ್ ರಾವ್ ಜಾಧವ್. | 14) ಧನಂಜಯ ಬಹುಮಾನ್ |

ಕಾಮಗಾರಿಗಾಗಿ ಬಡ್ಡಿ ರಹಿತ ಸಾಲ ನೀಡಿದವರ ವಿವರಗಳು ಈ ಕೆಳಗಿನಂತಿದೆ.

| | | |
|---|---|---|
| 1. | ಪ್ರೇಮಲತಾ ವೈ ರಾವ್. | ರೂ. 2 ಲಕ್ಷ |
| 2. | ಶ್ರೀ ನಾಗೇಶ್ವರ್ ರಾವ್ ಪವಾರ್ | ರೂ. 1 ಲಕ್ಷ |

ಪ್ರಸ್ತುತ ವರ್ಷದಲ್ಲಿ ಕಟ್ಟಡ ನಿಧಿಗೆ ದೇಣಿಗೆ ನೀಡಿದ ಮಹನೀಯರುಗಳ ಹೆಸರು ಈ ಕೆಳಗಿನಂತಿದೆ.

| | | |
|---|---|---|
| 1. | ಜಯಪ್ರಕಾಶ್ ರಾವ್ ಲಾಡ್, ಮೇರಿಹಿಲ್ (ದುಬೈ) | ರೂ. 50,000/– |
| 2. | ಬೇಕಲ್ ಕೃಷ್ಣಾನಂದ ಪವಾರ್, ಬೆಂಗಳೂರು | ರೂ. 40,000/– |
| 3. | ಶ್ರೀಮತಿ ಸಹನಾ ಜಯಂತ್, ಬೆಂಗಳೂರು | ರೂ. 20,000/– |
| 4. | ಕಮಲಾಕ್ಷ ರಾವ್ | ರೂ. 10.000/– |

**ಸಮುದಾಯದ ಭವನದ ದಿನದ ಬಾಡಿಗೆ ಹಾಗೂ ಇತರ ನಿಯಮಗಳು ನಮ್ಮ ಸಮುದಾಯದವರಿಗೆ ಈ ಕೆಳಗಿನಂತಿದೆ**

| | | |
|---|---|---|
| 1. | ದಿನದ ಬಾಡಿಗೆ ಬೆಳಿಗ್ಗೆ 6 ರಿಂದ ಸಂಜೆ 4 ರವರೆಗೆ | ರೂ. 25,000/– |
| 2. | ಸಂಜೆಯ ಬಾಡಿಗೆ ಸಮಯ ಸಂಜೆ 6 ರಿಂದ ರಾತ್ರಿ 10.30 ರ ವರೆಗೆ | ರೂ. 15,000/– |
| 3. | 2ನೇ ಅಂತಸ್ತಿನ ಭೋಜನ ಶಾಲೆಯನ್ನು ಕಾಯ್ದಿರಿಸುವುದಾದರೆ ದಿನಕ್ಕೆ/ರಾತ್ರಿಗೆ | ರೂ. 10,000/– ಬಾಡಿಗೆ |
| 4. | 2ನೇ ಅಂತಸ್ತಿನ ಭೋಜನ ಶಾಲೆಯನ್ನು ವೈಕುಂಠ ಸಮಾರಾಧನೆಗಾಗಿ ಉಪಯೋಗಿಸುವುದಾದರೆ ದಿನಕ್ಕೆ / ರಾತ್ರಿಯ ಬಾಡಿಗೆ | ರೂ 5,000/–ಮಾತ್ರ, |
| | ಈ ಹಾಲಿನ ಜೊತೆಗೆ 1ನೇ ಮಹಡಿಯ ಮುಖ್ಯ ಸಭಾಂಗಣ ಕೂಡಾ ಉಪಯೋಗಿಸುವುದಾದರೆ ಬಾಡಿಗೆ | ರೂ. 15,000/–. |

5. ಮಹಾಸಭೆಯ ತೀರ್ಮಾನದಂತೆ ಕಟ್ಟಡ ನಿರ್ಮಾಣಕ್ಕಾಗಿ ರೂ. 5 ಲಕ್ಷ ಮತ್ತು ಅದಕ್ಕಿಂತ ಅಧಿಕ ದೇಣಿಗೆ ನೀಡಿದವರು ದಿನಾಂಕ 01–04–2017 ರಿಂದ ಪ್ರಾರಂಭವಾಗಿ ವರ್ಷಕ್ಕೊಮ್ಮೆ (ಅಂದರೆ ಹಣಕಾಸಿನ ವರ್ಷಎಪ್ರಿಲ್ 1 ರಿಂದ ಮುಂದಿನ ಮಾರ್ಚ್ 31 ರ ತನಕ) ಸಮುದಾಯ ಭವನವನ್ನು ಬಾಡಿಗೆ ರಹಿತ ಅಂದರೆ ರೂ.10,000/– ವನ್ನು ಇತರೇ ವೆಚ್ಚಗಳಿಗಾಗಿ ಪಾವತಿಸಿ ತಮ್ಮ ಉಪಯೋಗಕ್ಕಾಗಿ ಬಳಸಿಕೊಳ್ಳಬಹುದು.

6. ಮಹಾಸಭೆಯ ತೀರ್ಮಾನದಂತೆ ರೂ. 1 ಲಕ್ಷ ದಿಂದ ರೂ. 5 ಲಕ್ಷದ ವರೆಗೆ ದೇಣಿಗೆ ನೀಡಿದವರು ದಿನಾಂಕ 01–04–2017 ರಿಂದ ಪ್ರಾರಂಭವಾಗಿ 2 ಆರ್ಥಿಕ ವರ್ಷಗಳಿಗೊಮ್ಮೆ ಭವನವನ್ನು ಬಾಡಿಗೆ ರಹಿತವಾಗಿ ತಮ್ಮ ಉಪಯೋಗಕ್ಕೆ ಬಳಸಿಕೊಳ್ಳ ಬಹುದು. ಬಾಡಿಗೆ ರಹಿತ ಅಂದರೆ ರೂ.10,000 ವನ್ನು ಇತರೇ ಖರ್ಚುಗಳಿಗಾಗಿ ಪಾವತಿಸಬೇಕು.

7. ದೇಣಿಗೆ ನೀಡಿದವರಿಗೆ ನೀಡುವ ಸವಲತ್ತನ್ನು ಅವರ ಮನೆಯವರ ಯಾವುದೇ ಸಮಾರಂಭಗಳಿಗೆ ಉಪಯೋಗಿಸಬಹುದು. ಈ ಸವಲತ್ತನ್ನು ನಮ್ಮ ಸಮಾಜದ ಬಂಧುಗಳಿಗಾಗಿ ಉಪಯೋಗಿಸುವುದಾದರೆ, ಮದುವೆ ಸಮಾರಂಭದ ಹೊರತಾಗಿ ಇತರ ಯಾವ ಸಮಾರಂಭಕ್ಕೂ ಈ ಸವಲತ್ತನ್ನು ಉಪಯೋಗಿಸುವಂತಿಲ್ಲ

8 ಮೇಲೆ ಹೇಳಿದ ಸವಲತ್ತುಗಳನ್ನು ಅದೇ ಆರ್ಥಿಕ ವರ್ಷದಲ್ಲಿಯೇ ಉಪಯೋಗಿಸತಕ್ಕದ್ದು, ಇಲ್ಲವಾದಲ್ಲಿ ಆ ಸವಲತ್ತುಗಳನ್ನು ಮುಂದಿನ ವರ್ಷಕ್ಕೆ ಕ್ಯಾರಿ ಓವರ್ ಮಾಡಲಾಗುವುದಿಲ್ಲ.

**ಸಮುದಾಯದ ಭವನದ ದಿನದ ಬಾಡಿಗೆ ಹಾಗೂ ಇತರ ನಿಯಮಗಳು ಇತರ ಸಮುದಾಯದವರಿಗೆ**

| | | |
|---|---|---|
| 1. | ದಿನದ ಬಾಡಿಗೆ ಬೆಳಿಗ್ಗೆ 6 ರಿಂದ ಸಂಜೆ 4 ರವರೆಗೆ | ರೂ. 30,000 |

2. ಸಂಜೆಯ ಬಾಡಿಗೆ ಸಂಜೆ 6 ರಿಂದ ರಾತ್ರಿ 10.30 ರವರೆಗೆ ರೂ. 20,000

3. 2ನೇ ಅಂತಸ್ತಿನ ಭೋಜನ ಶಾಲೆಯನ್ನು ಮಾತ್ರ ಕಾಯ್ದಿರಿಸುವುದಾದಾರೆ ದಿನಕ್ಕೆ/ರಾತ್ರಿಗೆ ಬಾಡಿಗೆ ರೂ. 10,000

4. 2ನೇ ಅಂತಸ್ತಿನ ಭೋಜನ ಶಾಲೆಯನ್ನು ವೈಕುಂಠ ಸಮಾರಾಧನೆಗಾಗಿ ಉಪಯೋಗಿಸುವುದಾದರೆ ಬಾಡಿಗೆ ರೂ. 7,000

ಮೇಲಿನ ಹಾಲಿನ ಜೊತೆಗೆ 1ನೇ ಅಂತಸ್ತಿನ ಮುಖ್ಯ ಸಭಾಂಗಣವನ್ನು ಕೂಡಾ ಉಪಯೋಗಿಸುವುದಾದರೆ ಬಾಡಿಗೆ ರೂ. 15,000

**ಸಮುದಾಯದ ಬಂಧುಗಳು ಹಾಗೂ ಇತರರಿಗೂ ಅನ್ವಯಿಸುವ ಸಮಾನ ನಿಯಮಗಳು ಈ ರೀತಿ ಇವೆ.**

1. ಬಾಡಿಗೆಯ ಹಣವನ್ನು ಸಂಪೂರ್ಣವಾಗಿ ಭವನವನ್ನು ಕಾಯ್ದಿರಿಸುವಾಗಲೇ ಪಾವತಿಸತಕ್ಕದ್ದು. ಹಣವನ್ನು ಪಾವತಿಸಿದಿದ್ದಲ್ಲಿ ಭವನವನ್ನು ಕಾಯ್ದಿರಿಸಲಾಗುವುದಿಲ್ಲ. ಬಾಡಿಗೆಯ ಹಣದೊಂದಿಗೆ ರೂ.5000/– ನ್ನು ಭದ್ರತಾ ಠೇವಣಿಯಾಗಿ ಪಾವತಿಸತಕ್ಕದ್ದು. ಸಮಾರಂಭದ ಸಮಯದಲ್ಲಿ ಭವನದ ಸಾಮಾಗ್ರಿಗಳಿಗೆ ಹಾನಿಯಾದಲ್ಲಿ ನಿಮ್ಮ ಭದ್ರತಾ ಠೇವಣಿಯಿಂದ ಹಾನಿಯನ್ನು ಸರಿ ಪಡೆಸುವುದಕ್ಕಾಗಿ ಬೇಕಾದ ಹಣವನ್ನು ಹಿಡಿದುಕೊಂಡು ಉಳಿದ ಹಣವನ್ನು ಸಮಾರಂಭದ ನಂತರ ಹಿಂತಿರುಗಿಸಲಾಗುವುದು. ಒಂದು ವೇಳೆ ಸಾಮಾಗ್ರಿಗಳ ಹಾನಿ ರೂ.5000/– ಕ್ಕಿಂತ ಹೆಚ್ಚಾದರೆ ಆ ಹಣವನ್ನು ಭವನದಿಂದ ನಿರ್ಗಮಿಸುವ ಮೊದಲೇ ಭರಿಸ ಬೇಕು.

2. ಭವನದಲ್ಲಿ ಯಾವ ಸಮಾರಂಭದ ಸಮಯದಲ್ಲಿಯೂ ಮದ್ಯವನ್ನು ಉಪಯೋಗಿಸುವ ಹಾಗಿಲ್ಲ.

3. ರಾತ್ರಿಯ ಸಮಾರಂಭದ ಸಮಯದಲ್ಲಿ ಧ್ವನಿವರ್ಧಕವನ್ನು ರಾತ್ರಿ 10.30 ರ ನಂತರ ಉಪಯೋಗಿಸುವ ಹಾಗಿಲ್ಲ ಮತ್ತು 10.30 ಕ್ಕೆ ಭವನದಿಂದ ನಿರ್ಗಮಿಸ ತಕ್ಕದ್ದು.

4. ಮದುವೆ ಸಮಾರಂಭಕ್ಕೆ ಭವನವನ್ನು ಕಾಯ್ದಿರಿಸುವವರು, ಮದುವೆಯ ಮುಂಚಿತವಾಗಿ ಸಂಘದ ಕಚೇರಿಗೆ ಮದುವೆಯ ಆಮಂತ್ರಣ ಪತ್ರಿಕೆಯ ಜೊತೆಗೆ ವಧು ವರರ ಭಾವ ಚಿತ್ರ ಮತ್ತು ಆಧಾರ್ ಕಾರ್ಡ್ ಯಾ ವೋಟರ್ ಐ.ಡಿ. ಕಾರ್ಡ್‌ನ ಪ್ರತಿಯನ್ನು ತಪ್ಪದೇ ನೀಡತಕ್ಕದ್ದು. (ಇದು ಸರಕಾರದ ಕಾಯ್ದೆ/ನಿಯಮ).

   ವಿವಾಹದ ನಂತರ ಅದರ ಪ್ರಮಾಣ ಪತ್ರವನ್ನು (Marriage Certificate) ನ್ನು ಸಂಘದ ಕಾರ್ಯಾಲಯದಲ್ಲಿ ಪಡೆದು ಕೊಳ್ಳಬಹುದು.

5. ಭವನವನ್ನು ಕಾಯ್ದಿರಿಸಿದ ದಿನದಲ್ಲಿ ನಿಮ್ಮ ಕಾರ್ಯಕ್ರಮಗಳು ನಡೆಯದಿದ್ದಲ್ಲಿ, ಬಾಡಿಗೆಯ ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಆದರೆ ಕಾಯ್ದಿರಿಸಿ ರದ್ದು ಮಾಡಿದ ದಿನದಂದು ಇತರರು ಕಾಯ್ದಿರಿಸಲು ಬಂದಲ್ಲಿ ನೀಡಿದ ಬಾಡಿಗೆ ಹಣದಲ್ಲಿ ರೂ.5000/– ವನ್ನು ವಜಾಮಾಡಿ ಉಳಿದ ಹಣವನ್ನು ನಿಮಗೆ ಹಿಂತಿರುಗಿಸಲಾಗುವುದು.

**"ಸಮಾಜ ಬಾಂಧವರು ವಿವಾಹ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ನಮ್ಮ ಸಮುದಾಯ ಭವನದಲ್ಲಿ ನಡೆಸುವುದರ ಮೂಲಕ ಸಂಘ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ."**

**ಮಹಿಳಾ ಘಟಕ:**

ಸಮಾಜ ಸಂಘದ ಮಾರ್ಗದರ್ಶನದಲ್ಲಿ ಸಮಾಜದ ಮಹಿಳಾ ಘಟಕದ ಸಂಚಾಲಕಿಯಾಗಿ ಶ್ರೀಮತಿ ಕೌಶಿಕಲಾ ಮೋಹನ್‌ಜೀ ಚಂದ್ರಮಾನ್ ಅವರೊಂದಿಗೆ ಉಪಸಂಚಾಲಕಿಯಾಗಿ ಶ್ರೀಮತಿ ಚೈತ್ರಾ ಧರೇಕರ್ ಕಾಸರಗೋಡು ಮತ್ತು ಗೀತಾ ಚಂದ್ರಶೇಖರ್ ಜಗತ್ತಾಪ್, ಇವರುಗಳ ನೇತೃತ್ವದಲ್ಲಿ ಸಂಘಟನಾ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿರುತ್ತೇವೆ. ನಮ್ಮ ಸಮಾಜದ ಮಹಿಳೆಯರೆಲ್ಲರೂ ಸಂಘದ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎನ್ನುವುದೇ ನಮ್ಮ ಕಳಕಳಿಯ ವಿನಂತಿ.

**ಯುವ ವೇದಿಕೆ:**

ಯುವಶಕ್ತಿಯನ್ನು ಜೊತೆಗೂಡಿಸಿಕೊಂಡು ಹೋಗುವ ಉದ್ದೇಶದಿಂದ ಯುವವೇದಿಕೆಯನ್ನು ಹುಟ್ಟು ಹಾಕಲಾಗಿದ್ದು ಅವರುಗಳು ಸಂಘದ ಎಲ್ಲಾ ಕಾರ್ಯಗಳಲ್ಲಿ ಸಹಕಾರ ನೀಡುತಿದ್ದಾರೆ. ಪ್ರಸ್ತುತ ಯುವ ವೇದಿಕೆಯ ಸಂಚಾಲಕರಾಗಿ ಶ್ರೀಯುತ ಲೋಕೇಶ್ ಪಿ.

ಬಹುಮಾನ್ ಮತ್ತು ಉಪ ಸಂಚಾಲಕರಾಗಿ ಶ್ರೀ ರಾಜ್‌ಕುಮಾರ್ ಲಾಡ್ ಮತ್ತು ಶ್ರೀ ಧನುಷ್ ಮುಳ್ಳಂಗೋಡು ಇವರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

**ವಲಯ ಸಮಿತಿಗಳು:**

ಪ್ರಸ್ತುತ ಕಾಸರಗೋಡು ಜಿಲ್ಲೆಯಲ್ಲಿ 6 ವಲಯ ಸಮಿತಿಗಳು ಹಾಗೂ ದ.ಕ. ಜಿಲ್ಲೆಯಲ್ಲಿ 4 ವಲಯ ಸಮಿತಿಗಳು ಕಾರ್ಯಾಚರಣೆಯಲ್ಲಿವೆ. ಇವುಗಳ ಸೂಕ್ತ ಹಾಗೂ ಸಮಯೋಚಿತ ಕಾರ್ಯಚರಣೆಯಿಂದಲೇ ಸಂಘದ ಎಲ್ಲಾ ಕಾರ್ಯಕ್ರಮಗಳು ನೆರವೇರಲು ಸಾಧ್ಯವಾಗುತ್ತಿರುವುದು. ಎಲ್ಲಾ ವಲಯ ಸಂಚಾಲಕರಿಗೂ ಮತ್ತು ಸದಸ್ಯರುಗಳಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು.

**ಆರ್ಥಿಕ ವ್ಯವಸ್ಥೆ:**

ಸಮಾಜ ಸಂಘಕ್ಕೆ ಈಗ ತನ್ನದೇ ಆದ ಆರ್ಥಿಕ ಸಂಪನ್ಮೂಲವಿರುತ್ತದೆ ಆದರೂ ನಮ್ಮೆಲ್ಲಾ ಕೆಲಸಗಳನ್ನು ಪೂರ್ಣ ರೀತಿಯಲ್ಲಿ ಮಾಡಲು ಸದ್ಯದ ಈ ಆದಾಯದಿಂದ ಸಾಧ್ಯವಾಗುತ್ತಿಲ್ಲ. ಈಗ ನಡೆಯುತ್ತಿರುವ ಸಂಘದ ಹೆಚ್ಚಿನ ಕಾರ್ಯಕ್ರಮಗಳು ಸಂಘದ ಸದಸ್ಯರ ದೇಣಿಗೆಯಿಂದಲೇ ನಡೆಯುತಿರುತ್ತದೆ. ಈಗಿನ ಆರ್ಥಿಕ ಸ್ಥಿತಿಯ ಪೂರ್ಣ ವಿವರಗಳನ್ನು ವಾರ್ಷಿಕ ಲೆಕ್ಕ ಪತ್ರದಲ್ಲಿ ನೀಡಿರುತ್ತೇವೆ.

**ಆಸ್ತಿಯ ವಿವರ:**

ಸಂಘವು ಮೂಲತಃ 30.25 ಸೆಂಟ್ಸ್ ಜಮೀನು ಹೊಂದಿದ್ದು. ಮೂಲಭೂತ ಸೌಕರ್ಯವಿರುವ 5000 ಚದರಡಿಯ ಸುವ್ಯವಸ್ತಿತ ಸಮುದಾಯ ಭವನ ಅದೇ ಜಮೀನನಲ್ಲಿ ನಿರ್ಮಾಣವಾಗಿದೆ. ಈಗಾಗಲೆ ರೂ.2 ಕೋಟಿಯಷ್ಟು ಹಣವು ಕಟ್ಟಡಕ್ಕಾಗಿ ವ್ಯಯವಾಗಿದ್ದು ಈಗ ನಮ್ಮ ಆಸ್ತಿ ಸುಮಾರು 5 ರಿಂದ 6 ಕೋಟಿಯಷ್ಟು ಬೆಲೆಯನ್ನು ಹೊಂದಿರುತ್ತದೆ. ಸರಕಾರದ ಹೈವೇ ವಿಸ್ತರಣೆಯ ಸಮಯದಲ್ಲಿ ನಮ್ಮ ಜಮೀನಿನ 1.50 ಸೆಂಟ್ಸ್ ಜಾಗವನ್ನು NHAI ವಶಪಡಿಸಿಕೊಂಡಿದ್ದು ಅದಕ್ಕೆ ಪರಿಹಾರ ರೂಪವಾಗಿ ಟಿ.ಡಿ.ಎಸ್. ನ್ನು ಕಳೆದು ರೂ. 2.66 ಲಕ್ಷವನ್ನು ನಮಗೆ ಪಾವತಿಸಿರುತ್ತಾರೆ. ಪ್ರಸ್ತುತ ವರ್ಷದಲ್ಲಿ ಮೇಲೆ ಹೇಳಿದ ಜಮೀನಿನ ಪ್ರಯುಕ್ತ NHAI ವತಿಯಿಂದ ಹೆಚ್ಚುವರಿ ರೂ.61879/–ಪಾವತಿ ಮಾಡಿರುತ್ತಾರೆ. ಈ ರೀತಿ ನಮಗೆ ಜಮೀನಿನ ಬಾಬ್ತು ರೂ.3,27,879 ಪರಿಹಾರ ಸಿಕ್ಕಿರುತ್ತದೆ. ಪ್ರಸ್ತುತ ನಮ್ಮ ಜಮೀನಿನ ವಿಸ್ತೀರ್ಣ 28.75 ಸೆಂಟ್ಸ್

**ಹೊಸ ನಿವೇಶನ ಖರೀದಿ ಸಮಿತಿ**

ನಮ್ಮ ಆರ್ಯ ಮರಾಠ ಭವನದ ಪಕ್ಕದಲ್ಲಿರುವ 22 ಸೆಂಟ್ಸ್ ಜಮೀನು ಮಾರಾಟಕ್ಕಿದೆ ಎನ್ನುವ ವಿಷಯ ತಿಳಿದ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರು ಈ ವಿಷಯವನ್ನು ಕಾರ್ಯಕಾರೀ ಸಮಿತಿಯಲ್ಲಿ ಚರ್ಚೆ ಮಾಡಿ ಆ ನಿವೇಶನವನ್ನು ಖರೀದಿ ಮಾಡುವುದಕ್ಕಾಗಿ ಈ ಕೆಳಗಿನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿದೆ. ಅದರ ಸದಸ್ಯರುಗಳ ವಿವರ ಈ ಕೆಳಗಿನಂತಿದೆ.

ಯತೀಂದ್ರ ಎ. ಬಹುಮಾನ್, ಪುರುಷೋತ್ತಮ ಬಹುಮಾನ್, ಕೃಷ್ಣ ಧರೇಕರ್, ರಾಜೇಶ್ ಪಾಟೀಲ್, ಶ್ರೀಧರ್ ರಾವ್ ಬಹುಮಾನ್, ಧನಂಜಯ ಬಹುಮಾನ್, ಪ್ರದೀಪ್ ಚಂದ್ರ ಜಾಧವ್, ಶ್ರೀಧರ್ ರಾವ್ ಪಾಟೀಲ್, ಮೋಹನ್ ರಾವ್ ಭೋಂಸ್ಲೆ, ಪ್ರೇಮಲತಾ ವೈ ರಾವ್, ಸಂಜೀವ ರಾವ್ ಸಿಂಧ್ಯಾ, ಬಿ.ಜೆ.ಚಂದ್ರಶೇಖರ್ ಪಾಟೀಲ್, ನಾಗೇಶ್ವರ್ ರಾವ್ ಪವಾರ್, ಯತೀಶ್ ಕುಮಾರ್ ಪಾಟೀಲ್, ಪದ್ಮನಾಭ ರಾವ್ ಜಾಧವ್, ನಾಗರಾಜ್ ಸಿಂಧ್ಯಾ, ಗಿರೀಶ್ ರಾವ್ ಭೋಂಸ್ಲೆ, ಹರಿಕೇಶವ್‌ಜೀ ಜಾಧವ್, ಗೋಪಿನಾಥ್ ರಾವ್ ಚೌಹಾಣ್, ಸದಾನಂದ ಕಟ್ವಾಟ್.

ಈಗಾಗಲೇ ಜಮೀನು ಖರೀದಿಯ ಬಗ್ಗೆ ಮಾಲೀಕರನ್ನು ಸಂಪರ್ಕಿಸಿ ಮಾತುಕತೆಯನ್ನು ನಡೆಸಿ ಸೆಂಟ್ಸ್‌ಗೆ ರೂ.7 ರಿಂದ 8 ಲಕ್ಷದ ಬೆಲೆಯಿರುವ ಆ ಜಮೀನನ್ನು ರೂ.5 ಲಕ್ಷಕ್ಕೆ ಮಾರಾಟ ಮಾಡುವುದಕ್ಕೆ ಅವರು ಒಪ್ಪಿಗೆ ನೀಡಿರುತ್ತಾರೆ. ಜಮೀನಿನ ದಾಖಲೆ ಪತ್ರಗಳನ್ನು ಈಗಾಗಲೇ ವಕೀಲರಿಂದ ಪರಿಶೀಲಿಸಿರುತ್ತೇವೆ. ಖರೀದಿಗಾಗಿ ಕೇವಲ 3 ತಿಂಗಳ ಕಾಲವಕಾಶವನ್ನು ನೀಡಿದ್ದು, ಈ ಸಂಬಂಧವಾಗಿ ಖರೀದಿ ಸಮಿತಿಯ ಸಭೆ ನಡೆಸಲಾಗಿ ಸಂಪನ್ಮೂಲ ಕ್ರೋಢೀಕರಿಸುವ ಬಗ್ಗೆ ವಿಚಾರ ವಿನಿಮಯ ನಡೆದು ಸಮುದಾಯದ ಸದಸ್ಯರಿಂದಲೇ ಶೇಕಡಾ 9ರ ಬಡ್ಡಿಯಲ್ಲಿ ಸಾಲ ಪಡೆಯುವ ಬಗ್ಗೆ ಅಥವಾ ಬ್ಯಾಂಕಿನಿಂದ ಸಾಲ ಪಡೆಯುವ ಕುರಿತು ಚಿಂತನೆ ನಡೆಸಲಾಗಿದೆ. ಇನ್ನು ಈ ಬಗ್ಗೆ ಮಹಾಸಭೆಯ ಅಭಿಪ್ರಾಯ ಪಡೆದು ಮುಂದುವರಿಯುವುದೆಂದು ತೀರ್ಮಾನಿಸಲಾಗಿದೆ.

**ರಕ್ತದಾನ:**

ಮಾಧವ ರಾವ್ ಜಗತ್ತಾಪ್ ಜಲ್ಲಿಗುಡ್ಡೆ ಇವರಿಗೆ ತುರ್ತು ರಕ್ತದ ಅವಶ್ಯಕತೆ ಕಂಡು ಬಂದಾಗ ಈ ಕೆಳಗಿನ ಸಮಾಜದ ದಾನಿಗಳು ರಕ್ತ ನೀಡಿ ಸಹಕರಿಸಿರುತ್ತಾರೆ.

1. ಬಿ.ರಾಜೇಶ್ ಪಾಟೀಲ್, ಜಲ್ಲಿಗುಡ್ಡೆ. 2) ಗಂಗಾಧರ ಬಹುಮಾನ್, ಜಲ್ಲಿಗುಡ್ಡೆ.

3) ಭರತ್ ಪವಾರ್ ಪಳ್ಳಕೆರೆ, ಕರ್ಮಾರ್.

**ವೈದ್ಯಕೀಯ ಹಾಗೂ ಇತರ ನೆರವುಗಳ ವಿವರ**

ಪ್ರಸ್ತುತ ವರ್ಷದಲ್ಲಿ ಸಂಘ ಹಾಗೂ ಸದಸ್ಯರುಗಳು ನೀಡಿದ ವೈದ್ಯಕೀಯ ನೆರವಿನ ವಿವರಗಳು.

ದಿವಂಗತ **ದಾಮೋದರ ಜಾಧವ್ ಜಲ್ಲಿಗುಡ್ಡೆ ಇವರಿಗೆ.**

| | |
|---|---|
| ನಮ್ಮ ಸಮಾಜ ಸಂಘ | ರೂ. 5,000 |
| ರಾಯಲ್ ಆರ್ಯಾಸ್ ದುಬೈ (RAD) | ರೂ. 35,000 |
| ಸಂಘದ ಸದಸ್ಯರುಗಳು | ರೂ. 27,000 |
| ಯುವ ವೇದಿಕೆ | ರೂ. 17,500 |
| **ಒಟ್ಟು** | **ರೂ. 84,500** |

**ದಿವಂಗತ ಪ್ರವೀಣ್ ಕುಮಾರ್ ಜಗತ್ತಾಪ್ ನೆಲ್ಲಿಕಟ್ಟೆ. ರವರಿಗೆ**

| | |
|---|---|
| ನಮ್ಮ ಸಮಾಜ ಸಂಘ | ರೂ. 5,000 |
| ಸಂಘದ ಸದಸ್ಯರುಗಳು | ರೂ. 7,000 |
| **ಒಟ್ಟು** | **ರೂ. 12,000** |

**ಶ್ರೀಮತಿ ವಿಜಯಲಕ್ಷ್ಮಿ ಕುಶಾಲಜೀ ಮಂಜೇಶ್ವರ**

| | |
|---|---|
| ನಮ್ಮ ಸಮಾಜ ಸಂಘ | ರೂ. 5,000 |
| ಸಂಘದ ಸದಸ್ಯರುಗಳು | ರೂ. 13,000 |
| **ಒಟ್ಟು** | **ರೂ. 18,000** |

**ಶ್ರೀ ಮನ್ವಿತ್ ವಾಗ್ಮಾನ್ ಎಕ್ಕೂರು ರವರಿಗೆ**

| | |
|---|---|
| ನಮ್ಮ ಸಮಾಜ ಸಂಘ | ರೂ. 5,000 |
| ನಮ್ಮ ಸಂಘ ಸದಸ್ಯರುಗಳು | ರೂ. 15,000 |
| ರಾಯಲ್ ಆರ್ಯಾಸ್ ದುಬೈ (RAD) | ರೂ. 30,000 |
| ಯುವ ವೇದಿಕೆ | ರೂ. 17,500 |
| **ಒಟ್ಟು** | **ರೂ. 67,500** |

**ಸಂಜೆ ಕಡವು ಕೃಷ್ಣೋಜಿ ಯವರ ಪುತ್ರ ಚಿತ್ರ ಕುಮಾರ್ ರವರಿಗೆ**

| | |
|---|---|
| ನಮ್ಮ ಸಮಾಜ ಸಂಘ | ರೂ. 5,000 |

**ಶ್ರೀಮತಿ ಕುಸುಮ W/o. ವಿಶ್ವನಾಥ್ ಅಡೂರು ಇವರಿಗೆ**

| | |
|---|---|
| ನಮ್ಮ ಸಮಾಜ ಸಂಘ | ರೂ. 10,000 |

**ಜಲ್ಲಿಗುಡ್ಡೆ ಕೈಡೇಲ್‌ನಲ್ಲಿ ನಡೆದ ನಾಗಮಂಡಲೋತ್ಸವದ ಸಲುವಾಗಿ ಸಂಘದ ವತಿಯಿಂದ ಮುಖ್ಯ ದ್ವಾರ ನಿರ್ಮಾಣಕ್ಕಾಗಿ ನೀಡಿದ ದೇಣಿಗೆ. ರೂ.9500/-.**

ಪ್ರಸ್ತುತ ವರ್ಷದಲ್ಲಿ ವೈದ್ಯಕೀಯ ನೆರವಿಗಾಗಿ ಧನ ಸಹಾಯ ಮಾಡಿದ ಮಹನೀಯರುಗಳ ವಿವರ ಈ ರೀತಿ ಇದೆ.

| | | | |
|---|---|---|---|
| 1. ಯತೀಂದ್ರ ಎ. ಬಹುಮಾನ್ | ರೂ. 2,000/- | 2. ರಾಜೇಶ್ ಪಾಟೀಲ್ | ರೂ. 2,000/- |
| 2. ಕೆ. ಶ್ರೀಧರ್ ರಾವ್ ಬಹುಮಾನ್ | ರೂ. 2,000/- | 4. ಪ್ರೇಮಲತಾ ವೈ. ರಾವ್ | ರೂ. 2,000/- |
| 5. ತ್ರಿವೇಣಿ ಜಾಧವ್ | ರೂ. 2,000/- | 6. ನಾಗರಾಜ್ ಸಿಂಧ್ಯಾ | ರೂ. 2,000/- |
| 7. ಉಮೇಶ್ ರಾವ್ ಜಾಧವ್ | ರೂ. 1,000/- | 8. ಸದಾನಂದ ಕಟ್ವಾಟ್ | ರೂ. 1,000/- |
| 8. ಪುರುಷೋತ್ತಮ ರಾವ್ | ರೂ. 1,000/- | 10. ನಾಗೇಶ್ವರ ರಾವ್ ಪವಾರ್ | ರೂ. 1,000/- |
| 9. ಕೀರ್ತನ್ ಕುಮಾರ್ | ರೂ. 1,000/- | 12. ಬಿ.ಕೃಷ್ಣ ಧರೇಕರ್ | ರೂ. 1,000/- |
| 13. ಪ್ರದೀಪ್ ಚಂದ್ರ ಜಾಧವ್ | ರೂ. 1,000/- | 14. ವಾಮನ ಮುಳ್ಳಂಗೋಡು | ರೂ. 1,000/- |
| 15. ಹರಿಶ್ಚಂದ್ರ ಪವಾರ್ | ರೂ. 500/- | 16. ಮೋಹನ್ ರಾವ್ ಭೋಂಸ್ಲೆ | ರೂ. 500/- |
| 17. ಯತೀಶ್ ಕುಮಾರ್ ಪಾಟೀಲ್ | ರೂ. 500/- | 18 ಹರಿಕೇಶವ್‌ಜೀ ಜಾಧವ್ | ರೂ. 500/- |
| 19. ರಾಮೋಜಿ ರಾವ್ ವಾಗ್ಮಾನ್ | ರೂ. 500/- | 20. ಶ್ರೀಧರ್ ರಾವ್ ಪಾಟೀಲ್ | ರೂ. 500/- |
| 21 ರಾಜ್ ಚಂದ್ರಮಾನ್ ದುಬೈ. | ರೂ. 12,000/- | 22. ಮಧುಸೂದನ್ ರಾವ್ | ರೂ. 20,000/- |
| | | **ದೇಣಿಗೆಯ ಒಟ್ಟು ಹಣ** | **ರೂ. 55,000** |

**ಇತರ ವಿಚಾರಗಳು.**

ದಿವಂಗತ ಸೀತಾರಾಮ ಪವಾರ್ ಇವರ ಸ್ಮರಣಾರ್ಥ ರೂ.20,000/- ವನ್ನು ಕಾನ್ಸರ್ ಪೀಡಿತ ರೋಗಿಗಳಿಗೆ ವೈದ್ಯಕೀಯ ಸಹಾಯ ನೀಡುವ ಸಲುವಾಗಿ ಸೀತಾರಾಮ್ ಪವಾರ್ ರವರ ಪುತ್ರ ಶ್ರೀ ಮಧುಸೂದನ್ ಪವಾರ್ ಸಂಘಕ್ಕೆ ನೀಡಿರುತ್ತಾರೆ.

ಶ್ರೀ ಮೋಹನ್ ರಾವ್ ಸಪ್ಟೇಕರ್ ಎಕ್ಕೂರುರವರು ಅವರ ಮಾತೃಶ್ರೀಯವರಾದ ದಿ। ಬಾಗೀರಥಿಯವರ ನೆನಪಿಗಾಗಿ ರೂ.10000/- ವನ್ನು ವಿದ್ಯಾನಿಧಿಗಾಗಿ ದೇಣಿಗೆ ನೀಡಿರುತ್ತಾರೆ.

ಶ್ರೀ ರಾಜ್ ಚಂದ್ರಮಾನ್ ದುಬೈ ಇವರು ರೂ.12,000/- ವನ್ನು ಮಾಸ್ಟರ್ ರಾಖೇಶ್ ಇವರ ವೈದ್ಯಕೀಯ ನೆರವಿಗಾಗಿ ನೀಡಿರುತ್ತಾರೆ.

ದಿನಾಂಕ 25-11-2018 ರಂದು ಭಾನುವಾರ ಎಲ್.ಪಿ ಸ್ಕೂಲ್ ಪುಂಡೂರಿನಲ್ಲಿ ಮಲ್ಲ ವಲಯ ಸಮಾವೇಶ ನಡೆಯಿತು.

ದಿನಾಂಕ 10-02-2019 ರಂದು ಭಾನುವಾರ ಆದೂರು, ಕುಂಟಾರು ಮತ್ತು ಆದೂರು ವಲಯಗಳ ವಲಯ ಸಮಾವೇಶ ಕುಂಟಾರು ಶಾಲಾ ಮೈದಾನದಲ್ಲಿ ಜರಗಿತು.

ದಿನಾಂಕ 24-08-2018 ರಂದು ಪಶ್ಚಿಮ ವಲಯದ ಬಂಧುಗಳಿಂದ ಶ್ರೀ ವರ ಮಹಾಲಕ್ಷ್ಮೀ ಪೂಜೆ ನಮ್ಮ ಸಂಘದ ಭವನದಲ್ಲಿ ನಡೆಯಿತು.

ದಿನಾಂಕ 29-05-2018 ರಂದು ಮಂಗಳೂರಿನಲ್ಲಿ ಹಗಲು ರಾತ್ರಿ ಸುರಿದ ಮಳೆಯಿಂದ ನೆರೆ ಬಂದಾಗ ಮಂಗಳೂರಿನ ನಾಗರಿಕರು ಬಹಳ ಬವಣೆ ಪಡುವಂತಾಯಿತು. ನಮ್ಮ ಸಂಘದ ಆಸುಪಾಸಿನಲ್ಲಿರುವ ನಿವಾಸಿಗಳ ಮನೆಗಳ ಒಳಗೆ ಮಳೆಯ ನೀರು ನುಗ್ಗಿದ ಕಾರಣ ರಾತ್ರಿಯನ್ನು ಅವರ ಮನೆಯಲ್ಲಿ ನಿಲ್ಲುವ ಸ್ಥಿತಿಯಲ್ಲಿರಲಿಲ್ಲ. ಅಂತಹ ಸಮಯದಲ್ಲಿ ಸುಮಾರು 100 ಜನರಿಗಿಂತಲೂ ಹೆಚ್ಚು ಜನರು ನಮ್ಮ ಸಂಘದ ಸಮುದಾಯ ಭವನದಲ್ಲಿ 2 ದಿನ ಆಶ್ರಯ ಪಡೆದಿರುತ್ತಾರೆ. ಅವರಿಗೆ ಆಶ್ರಯ ನೀಡುವುದರ ಜೊತೆಗೆ ಗಂಜಿ ಕೇಂದ್ರವನ್ನೂ ತೆರೆದು ಜಿಲ್ಲಾಡಳಿದ ಜೊತೆಗೆ ಕೆಲಸ ಮಾಡಿದೆವು. ಈ ನಮ್ಮ ಕಾರ್ಯವನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾಡಳಿತವು ಬಹಳ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಇದು ನಿಜಕ್ಕೂ ನಮಗೆ ಹೆಮ್ಮೆಯ ವಿಷಯ. ಮುಂದೆ ನಿಂತು ಇದರ ಜವಾಬ್ದಾರಿಯನ್ನು ಹೊತ್ತವರು ನಮ್ಮ ಮಾಜಿ ಅಧ್ಯಕ್ಷರಾದ ದಿವಂಗತ ಎಂ.ದೇವೋಜಿ ರಾವ್ ಜಾಧವ್.

**ಅಂತರ್ಜಾಲ:**

ಸಮಾಜ ಬಾಂಧವರ ಜತೆ ನಿರಂತರ ಸಂಪರ್ಕದಲ್ಲಿರಲು ಆರ್ಯ ಮರಾಠಸ್ ಫೇಸ್‌ಬುಕ್ ಖಾತೆಯನ್ನು (aryamarathas Facebook) ತೆರೆಯಲಾಗಿದೆ. ಅದೇ ರೀತಿ ನಮ್ಮ ಅಂತರ್ಜಾಲ ತಾಣ www.aryamaratha.com ಕೂಡಾ ಜಾಗತಿಕವಾಗಿ ಲಭ್ಯವಿದ್ದು ಇದರಲ್ಲಿ ಸಮಾಜದ ಬಗ್ಗೆ ಸಂಕ್ಷಿಪ್ತ ವರದಿ, ಸಂಘದ ಪದಾಧಿಕಾರಿಗಳ ವಿವರ, ನೊಂದಾಯಿತ ಸದಸ್ಯರ ವಿವರ, ವಿಳಾಸ ಕೈಪಿಡಿ, ದೇವರಮನೆ ವಿವರಗಳು ಸಮಾಜ ಸಂಘ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳ ವಿವರಗಳು ಲಭ್ಯವಿದ್ದು ಮುಖ್ಯವಾಗಿ

ವಧು–ವರಾನ್ವೇಷಣೆ ಮಾಡುವವರಿಗಾಗಿ ವಧು–ವರರ ವಿವರಗಳನ್ನು ಒದಗಿಸಿಕೊಟ್ಟು ಇದರ ಉಪಯೋಗ ಪಡೆಯಬಹುದು. ಸಮುದಾಯ ಭವನದ ಪ್ರಚಾರಕ್ಕಾಗಿ Arya Maratha Bhavana ಎಂಬ Facebook Page ತೆರೆಯಲಾಗಿದೆ. ಸಂಪರ್ಕ ಸಂವಹನಕ್ಕಾಗಿ ಮಿಂಚಂಚೆ (email) aryamarathas@gmail.com ಸೌಲಭ್ಯ ಕೂಡಾ ಲಭ್ಯವಿದೆ. ಮುಂದಿನ ದಿನಗಳಲ್ಲಿ ನಮ್ಮ ಸಮಾಜ ಭವನದ ಬುಕಿಂಗ್ online ನಲ್ಲಿ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಯತ್ನ ಜಾರಿಯಲ್ಲಿದೆ.

**ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯ ತೀರ್ಮಾನದಂತೆ ಮಹಾಸಭೆಯ ಮಂಜೂರಾತಿಗಾಗಿ ಮಂಡಿಸಲ್ಪಡುವ ವಿಷಯಗಳು.**

1. ಬೈಲಾ ಸಮಗ್ರ ತಿದ್ದುಪಡಿ ಬಗ್ಗೆ.
2. ಸಂಘದ ಭವನದ ಪಕ್ಕದಲ್ಲಿರುವ 22 ಸೆಂಟ್ಸ್ ಸ್ಥಳವನ್ನು ಖರೀದಿಸುವ ಬಗ್ಗೆ.

**ಉಪಸಂಹಾರ:**

ವರದಿ ವರ್ಷದಲ್ಲಿ ಸಂಘದ ಕಾರ್ಯಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಸಮಾಜ ಬಾಂಧವರ ಸಂಪರ್ಕ ವೃದ್ಧಿಗಾಗಿ ನಮ್ಮಿಂದಾದ ಪ್ರಯತ್ನ ಮಾಡಿರುತ್ತೇವೆ. ಸಂಘವು ಸಮಾಜ ಬಾಂಧವರ ಐಕ್ಯತೆ, ಸ್ನೇಹ ಸೌಹಾರ್ದತೆಗಾಗಿ ಸದಾ ಪ್ರಯತ್ನ ಮಾಡುತ್ತಲೇ ಇದೆ. 2018–19ನೇ ಸಾಲಿನ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಉತ್ತಮ ಸಲಹೆ ಸೂಚನೆಗಳನ್ನಿತ್ತು ಸಹಕರಿಸಿದ ನಮ್ಮ ಆತ್ಮೀಯರಿಗೆ, ಬಂಧುಗಳಿಗೆ, ಪದಾಧಿಕಾರಿಗಳಿಗೆ, ಸಂಘದ ಸದಸ್ಯರುಗಳಿಗೆ ಮತ್ತು ಮಹಿಳಾ ಸದಸ್ಯರುಗಳಿಗೆ, ಯುವ ವೇದಿಕೆ ಸದಸ್ಯರುಗಳಿಗೆ ಮತ್ತು ಪ್ರತ್ಯೇಕವಾಗಿ ವಲಯ ಸಂಚಾಲಕರಿಗೆ ನಮ್ಮ ನಮನಗಳು ಹಾಗೂ ಧನ್ಯವಾದಗಳು. ನಮ್ಮ ವಿವಿಧ ಕಾರ್ಯಕ್ರಮಗಳಿಗೆ ಪ್ರಾಯೋಜಕರಾಗಿ ಸಹಕರಿಸಿ ಪ್ರೋತ್ಸಾಹಿಸಿದ ಮಹನೀಯರುಗಳಿಗೆ ನಮ್ಮ ಆತ್ಮೀಯ ಧನ್ಯವಾದಗಳು. ಅಂತೆಯೇ ನಮ್ಮ ಸಮುದಾಯ ಭವನಕ್ಕೆ ಅನುದಾನ ನೀಡಿದ ಕರ್ನಾಟಕ ಸರಕಾರದ ವಿವಿಧ ಇಲಾಖೆಗಳಿಗೆ ಮತ್ತು ಮಂಗಳೂರು ಮಹಾನಗರ ಪಾಲಿಕೆ ಹಾಗೂ ಸಹಕರಿಸಿದ ಎಲ್ಲಾ ಜನ ಪ್ರತಿನಿಧಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಕೂಡಾ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತಾ ನಮ್ಮ ವರದಿಗೆ ಪೂರ್ಣವಿರಾಮವನ್ನು ಹಾಕುತ್ತಿದ್ದೇವೆ.

ಜೈ ಅಂಬಾಭವಾನಿ, ಜೈ ಶಿವಾಜಿ ಮಹಾರಾಜ್

ವಂದನೆಗಳು,

ಇತೀ

ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ.)

ಮಂಗಳೂರು – ಕಾಸರಗೋಡು

ಮಂಗಳೂರು

ದಿನಾಂಕ: 09–06–2019